
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

14 ಏಪ್ರಿಲ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 35 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ರಾಜಸ್ಥಾನ ರಾಯಲ್ಸ್ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆತಿಥೇಯ ಸನ್ ರೈಸರ್ಸ್ ಹೈದರಾಬಾದ್ ತಂಡ 20 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 216 ರನ್ ಕಲೆ ಹಾಕಿದೆ.



ಸಮಾನತೆಯ ಹರಿಕಾರ ಅಂಬೇಡ್ಕರ್ » 2



ಸರ್ಕಾರಿ ಗೌರವಗಳೊಂದಿಗೆ ಗಾಯಕಿ ಆಶಾ ಬೋಸ್ಲೆ ಅವರ ಅಂತ್ಯಕ್ರಿಯೆ ನೆರವೇರಿತು



ಯಾವುದೇ ರಾಷ್ಟ್ರಕ್ಕೂ ತೈಲ ಮಾರಾಟ ಮಾಡಲು ಸಿದ್ಧ : ಇರಾನ್ » 4

# ಹಾಸನ ವಿಶ್ವವಿದ್ಯಾಲಯದಲ್ಲಿ ಖಾಯಂ ಪ್ರಾಧ್ಯಾಪಕರೇ ಇಲ್ಲ

## 27 ಬೋಧಕ, 244 ಬೋಧಕೇತರ ಹುದ್ದೆ ಖಾಲಿ | ಹೊರಗುತ್ತಿಗೆ, ಅತಿಥಿ ಉಪನ್ಯಾಸಕರ ಮೇಲೆ ಭಾರ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸು ಸಾಕಾರಗೊಳಿಸಲು ಅಸ್ತಿತ್ವಕ್ಕೆ ಬಂದ ಹಾಸನ ವಿಶ್ವವಿದ್ಯಾಲಯ ಸಿಬ್ಬಂದಿ ಕೊರತೆಯಿಂದ ಅವ್ಯವಸ್ಥೆಯ ಅಂಚಿನಲ್ಲಿ ನಿಂತಿದೆ. ಖಾಯಂ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಇಲ್ಲದೇ ಆಡಳಿತ ವ್ಯವಸ್ಥೆ ಸಂಪೂರ್ಣ ಹೊರಗುತ್ತಿಗೆ ನೌಕರರ ಮೇಲೆ ನಿಂತಿರುವ ಸ್ಥಿತಿ ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಕ್ಕೆ ತಳ್ಳಿದಂತಾಗಿದೆ.

**ಮಂಜೂರಾದ ಹುದ್ದೆಗಳೆಲ್ಲಾ ಖಾಲಿ**

ಹಾಸನ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ 27 ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಉಳಿದಿವೆ. ಇದುವರೆಗೂ ಒಬ್ಬ ಪ್ರಾಧ್ಯಾಪಕರನ್ನು ಖಾಯಂ ನೇಮಕಾತಿ ಮಾಡಿಕೊಂಡಿಲ್ಲ. ಈ ಪರಿಣಾಮ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆ ಬಹುತೇಕ ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿವೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾಲಯದ 10 ಪ್ರಾಧ್ಯಾಪಕರು ಹಾಸನ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಅವರು ತಮ್ಮ ಮಾತೃ ವಿಶ್ವವಿದ್ಯಾಲಯಕ್ಕೆ ಮರಳಲು ಸಿದ್ಧರಾಗಿದ್ದು, ಸರ್ಕಾರದ ಆದೇಶಕ್ಕಾಗಿ ಕಾಯುತ್ತಿದ್ದಾರೆ. ಆದೇಶ ಹೊರಬಿದ್ದ ಕ್ಷಣ ಅವರು ಹಿಂತಿರುಗುವ ಸಾಧ್ಯತೆ ಇದೆ. ಹೀಗಾದರೆ ಹಾಸನ ವಿಶ್ವವಿದ್ಯಾಲಯದಲ್ಲಿ ಬೋಧನಾ ವ್ಯವಸ್ಥೆ ಮತ್ತಷ್ಟು ಹದಗೆಡುವ ಭೀತಿ ಎದುರಾಗಿದೆ. ಖಾಯಂ ನೇಮಕಾತಿ ಬದಲು ತಾತ್ಕಾಲಿಕ ವ್ಯವಸ್ಥೆಯನ್ನು ಮುಂದುವರೆಸಲು ಮತ್ತೆ ಮತ್ತೆ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಗೆ ಮುಂದಾಗಿದೆ.

**ಬೋಧಕೇತರ ಹುದ್ದೆಯೂ ಖಾಲಿ**

245 ಮಂಜೂರಾದ ಬೋಧಕೇತರ ಹುದ್ದೆಗಳಲ್ಲಿ ಕೇವಲ ಒಬ್ಬ ಮೇಲ್ವಿಚಾರಕ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 244 ಹುದ್ದೆಗಳು ಖಾಲಿ ಇವೆ. ದಿನನಿತ್ಯದ ಕಾರ್ಯಚಟುವಟಿಕೆಗಳು ಹೊರಗುತ್ತಿಗೆ ಸಿಬ್ಬಂದಿ ಮತ್ತು ತಾತ್ಕಾಲಿಕ ನೌಕರರ ಮೇಲೆ ನಿಂತಿವೆ. 245 ಬೋಧಕೇತರ ಸಿಬ್ಬಂದಿ ಅಗತ್ಯವಿದ್ದು, ಹೊರಗುತ್ತಿಗೆ ಆಧಾರದಲ್ಲಿ 3 ಮಂದಿ ಕಂಪ್ಯೂಟರ್ ಆಪರೇಟರ್‌ಗಳು, 4 ಮಂದಿ ಕ್ಲರ್ಕ್‌ಗಳು, 8 ಮಂದಿ ಭದ್ರತಾ ಸಿಬ್ಬಂದಿ, 5 ಮಂದಿ ಕೈತೋಟ ನಿರ್ವಹಣಾ ಸಿಬ್ಬಂದಿ, 7 ಮಂದಿ ಸ್ವಚ್ಛತಾ ಸಿಬ್ಬಂದಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ. ಈಗಿರುವ ಸಿಬ್ಬಂದಿ ಮೇಲೆ ಕರ್ತವ್ಯದ ಒತ್ತಡ ಹೆಚ್ಚಿ, ಸರಿಯಾದ ಸಮಯಕ್ಕೆ ಶೈಕ್ಷಣಿಕ ಕಾರ್ಯಚಟುವಟಿಕೆ ನಡೆಸಲು ಸಾಧ್ಯವಾಗುತ್ತಿಲ್ಲ.

ಖಾಯಂ ಪ್ರಾಧ್ಯಾಪಕರು ಇಲ್ಲದಿರುವುದರಿಂದ ಅತಿಥಿ ಉಪನ್ಯಾಸಕರೇ ಆಧಾರವಾಗಿದ್ದಾರೆ. ಹೀಗಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕುಸಿತವಾಗುತ್ತಿದೆ. ಸದ್ಯ 60 ಮಂದಿ ಅತಿಥಿ ಉಪನ್ಯಾಸಕರನ್ನು ನಿಯೋಜಿಸಲಾಗಿದೆ. ಅವರಲ್ಲಿ 40 ಮಂದಿ ಹೇಮಗಂಗೋತ್ರಿ ಕ್ಯಾಂಪಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉಳಿದ 20 ಮಂದಿ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಮತ್ತು ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇದು ಖಾಯಂ ಉಪನ್ಯಾಸಕರ ಕೊರತೆಯನ್ನು ತಾತ್ಕಾಲಿಕವಾಗಿ ನಿಭಾಯಿಸುವ ಪ್ರಯತ್ನವಾದರೂ, ದೀರ್ಘಾವಧಿಯಲ್ಲಿ ಶೈಕ್ಷಣಿಕ ಗುಣಮಟ್ಟಕ್ಕೆ ಹೊಡೆತ ಬೀಳಲಿದೆ. ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರೇ ಹೆಚ್ಚು ಬೋಧನಾ ಹೊಣೆ ಹೊತ್ತಿರುವುದು ವಿಶ್ವವಿದ್ಯಾಲಯದ ಶಿಕ್ಷಣಿಕ ಗುಣಮಟ್ಟವನ್ನು ಪ್ರಶ್ನಿಸುವಂತಾಗಿದೆ.



### ಸರ್ಕಾರದ ನಿರ್ಲಕ್ಷ್ಯವೇ ಕಾರಣ

ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಹೊಸ ವಿಶ್ವವಿದ್ಯಾಲಯಗಳನ್ನು ಘೋಷಿಸಿ ಸ್ಥಾಪಿಸಲಾಯಿತು. ಆದರೆ, ಮೂಲಭೂತ ಮಾನವ ಸಂಪನ್ಮೂಲ, ಆಡಳಿತ ಮೂಲಸೌಕರ್ಯ ಮತ್ತು ಖಾಯಂ ನೇಮಕಾತಿಗಳ ಕಡೆ ಸಮರ್ಪಕ ಗಮನ ಹರಿಸಲಾಗಿಲ್ಲ. ಹೀಗಾಗಿ ಹಾಸನ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗೆ ಕುಂಠಿತಗೊಳ್ಳಲು ಪ್ರಮುಖ ಕಾರಣವಾಗಿದೆ. ಸರ್ಕಾರ ತಕ್ಷಣ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಗುಣಮಟ್ಟಕ್ಕೆ ಭಾರೀ ಹೊಡೆತ ಬೀಳಲಿದೆ.

### ಪ್ರವೇಶಾತಿಗೆ ವಿದ್ಯಾರ್ಥಿಗಳ ಹಿಂದೇಟು

ಈಗಾಗಲೇ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿರುವುದರಿಂದ ವಿದ್ಯಾರ್ಥಿಗಳ ಪದವಿ ಶಿಕ್ಷಣಕ್ಕಾಗಿ ಕಾಲೇಜುಗಳ ಹುಡುಕಾಟ ನಡೆಸುತ್ತಿದ್ದಾರೆ. ಆದರೆ, ಹಾಸನ ವಿವಿಯಲ್ಲಿ ಖಾಯಂ ಪ್ರಾಧ್ಯಾಪಕರ ಕೊರತೆ, ಆಡಳಿತ ಅವ್ಯವಸ್ಥೆ, ಭವಿಷ್ಯದ ಅನಿಶ್ಚಿತತೆ ಇವುಗಳಿಂದಾಗಿ ವಿಶ್ವವಿದ್ಯಾಲಯಕ್ಕೆ ಸೇರುವ ವಿದ್ಯಾರ್ಥಿಗಳಲ್ಲೂ ಆತಂಕ ಮೂಡಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಖಾಯಂ ಬೋಧಕ ಸಿಬ್ಬಂದಿ ಇಲ್ಲದ ವಿಶ್ವವಿದ್ಯಾಲಯದಲ್ಲಿ ಓದಿದರೆ ಭವಿಷ್ಯ ಏನೆಂಬ ಪ್ರಶ್ನೆಯನ್ನು ಎತ್ತುತ್ತಿದ್ದಾರೆ. ಇದರಿಂದ ಹೊಸ ಪ್ರವೇಶಾತಿ ವಿದ್ಯಾರ್ಥಿಗಳ ಸಂಖ್ಯೆಯ ಮೇಲೂ ಪರಿಣಾಮ ಬೀಳುವ ಸಾಧ್ಯತೆ ಇದೆ.

## ಏ.15ಕ್ಕೆ ವಿರೋಧ ಪಕ್ಷಗಳ ಸಭೆ

• ಪ್ರಜೋದಯ ವರದಿ

**ಬೆಂಗಳೂರು :** ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನ ಕುರಿತು ಚರ್ಚಿಸಲು ಏ.15 ರಂದು ಕಾಂಗ್ರೆಸ್ ಎಲ್ಲಾ ವಿರೋಧ ಪಕ್ಷಗಳ ಸಭೆ ಕರೆಯಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಹೇಳಿದ್ದಾರೆ. ಇದೇ ವೇಳೆ ಕೇಂದ್ರ ಸರ್ಕಾರ ಎಲ್ಲಾ ಪಾಲುದಾರರೊಂದಿಗೆ ಸಮಗ್ರ ಸಮಾಲೋಚನೆ ನಡೆಸಲು ಸಿದ್ಧವಾಗಿಲ್ಲವೆಂದು ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ಕಾಯ್ದೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಆದರೆ ಅದರ ವ್ಯಾಪಕ ರಾಷ್ಟ್ರೀಯ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಅನುಷ್ಠಾನದ ಬಗ್ಗೆ ವ್ಯಾಪಕ ಚರ್ಚೆಯ ಅಗತ್ಯವಿದೆ. ಈ ಸಂಬಂಧ ಕೇಂದ್ರ ಸರ್ಕಾರ ಸಭೆ ಕರೆದಿದೆ. ಕಿರಣ್ ರಿಜಿಜು ಅಥವಾ ಪ್ರಧಾನಿ ನನಗೆ ಬರೆದ ಪತ್ರಕ್ಕೆ ನಾನು ಈಗಾಗಲೇ ಉತ್ತರಿಸಿದ್ದೇನೆಂದು ಹೇಳಿದರು.

ಕೇಂದ್ರ ಸರ್ಕಾರ ಎಲ್ಲಾ ಪಕ್ಷಗಳನ್ನು ಕರೆದು ಚರ್ಚೆಗೆ ಅವಕಾಶ ನೀಡಿದರೆ, ನಾವು ಭಾಗವಹಿಸಿ ನಮ್ಮ ಸಲಹೆಗಳನ್ನು ನೀಡಬಹುದು. ಅವರು ಸರ್ವ ಪಕ್ಷ ಸಭೆ ಕರೆಯಲು ಸಿದ್ಧರಿಲ್ಲ. ಈ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ತಿಳಿಸುತ್ತೇವೆಂದರು.

## ಇಂದು ಅಂಬೇಡ್ಕರ್ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏ.14 ರಂದು ಬೆಳಿಗ್ಗೆ 11 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸುವರು. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು.

ಸಂಸದ ಶ್ರೇಯಸ್ ಎಂ. ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಂಗಳೂರು ಅಕ್ಕ ಐ.ಎ.ಎಸ್.ಅಕಾಡೆಮಿ ಮುಖ್ಯಸ್ಥ ಡಾ|| ಶಿವಕುಮಾರ್ ಅವರು ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಗೆ ಮಾಲಾರ್ಪಣೆ ನಂತರ ಮೆರವಣಿಗೆಗೆ ಚಾಲನೆ ನೀಡಲಾಗುವುದು.

# ಜಿಲ್ಲೆಯಲ್ಲಿ 11 ನಕಲಿ ವೈದ್ಯರ ಕ್ಲಿನಿಕ್‌ಗಳಿಗೆ ಬೀಗ

• ಪ್ರಜೋದಯ ವರದಿ



**ಹಾಸನ :** ಜಿಲ್ಲೆಯಲ್ಲಿ 11 ಮಂದಿ ನಕಲಿ ವೈದ್ಯರು ನಡೆಸುತ್ತಿದ್ದ ಕ್ಲಿನಿಕ್‌ಗಳ ಮೇಲೆ ಆರೋಗ್ಯ ಇಲಾಖೆ ತಂಡವು ದಾಳಿ ನಡೆಸಿ ಕ್ಲಿನಿಕ್‌ಗಳನ್ನು ಬಂದ್ ಮಾಡಿಸಿದೆ.

ಗ್ರಾಮೀಣ ಹಾಗು ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಕಲಿ ವೈದ್ಯರ ಹಾವಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಕಠಿಣ ಕ್ರಮಗಳಿಗೆ ಮುಂದಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದಂತೆ ಆರೋಗ್ಯ ಇಲಾಖೆ ರಾಜ್ಯಾದ್ಯಂತ ವ್ಯಾಪಕ ದಾಳಿ ಆರಂಭಿಸಿದೆ.

ಗುಪ್ತಚರ ಇಲಾಖೆಯ ಮಾಹಿತಿಯ ಪ್ರಕಾರ ಜಿಲ್ಲೆಯಲ್ಲಿ 11 ನಕಲಿ ಕ್ಲಿನಿಕ್ ಇರುವುದು ದೃಢಪಟ್ಟ ಹಿನ್ನಲೆ ಸಂಬಂಧಿತ ಕ್ಲಿನಿಕ್‌ಗಳು ಮತ್ತು ಆಸ್ಪತ್ರೆಗಳ ಮೇಲೆ ಅಧಿಕಾರಿಗಳ ತಂಡ ದಾಳಿ ನಡೆಸಿ ಬೀಗ ಹಾಕಿದೆ. ಕೆಲವರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಅರಕಲಗೂಡು-2 ಚನ್ನರಾಯಪಟ್ಟಣ-3 ಅರಸೀಕೆರೆ -3 ಹಾಗು ಆಲೂರು-1 ಸೇರಿ ಒಟ್ಟು 11 ಕ್ಲಿನಿಕ್‌ಗಳಿಗೆ ಬೀಗ ಹಾಕಲಾಗಿದೆ.

ನಕಲಿ ವೈದ್ಯರ ವಿರುದ್ಧ ಸರ್ಕಾರ ಹೊಸ ನಿಯಮಗಳನ್ನು ಜಾರಿಗೆ ತರಲು ಮುಂದಾಗಿದೆ. ಮೊದಲ ಬಾರಿ ತಪ್ಪು ಸಾಬೀತಾದರೆ 25,000 ರೂ. ದಂಡ, ಎರಡನೇ ಬಾರಿ 1 ಲ.ರೂ. ದಂಡ, ಮೂರನೇ ಬಾರಿ ಜೈಲು ಶಿಕ್ಷೆ ಜಾರಿ ಮಾಡಿದೆ. ಈ ಕ್ರಮಗಳು ಕಾನೂನು ಬದ್ಧವಾಗಿ ಜಾರಿಗೊಳ್ಳಲಿವೆ. ಅದಕ್ಕಾಗಿ ಜಿಲ್ಲಾಧಿಕಾರಿ, ಭಾರತೀಯ ವೈದ್ಯಕೀಯ ಸಂಘ ಹಾಗು ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ನಕಲಿ ವೈದ್ಯರ ವಿರುದ್ಧ ದೂರುಗಳ ಪರಿಶೀಲನೆ ಹಾಗು ವಿಚಾರಣೆ ನಡೆಸಲಿದೆ.

ಗ್ರಾಮೀಣ ಭಾಗಗಳಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ವ್ಯಕ್ತವಾಗಿದೆ. ಕ್ಲಿನಿಕ್‌ಗಳ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂತಹ ನಕಲಿ ವೈದ್ಯರು ಬಡ ರೋಗಿಗಳ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿರುವ ಆರೋಪಗಳು ಕೇಳಿ ಬಂದಿವೆ.

ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದಲೂ ತಾಲ್ಲೂಕು ಕೇಂದ್ರ ಹಾಗು ಹೋಬಳಿ ಕೇಂದ್ರಗಳಲ್ಲಿ ಹಲವರು ವೈದ್ಯಕೀಯ ಪದವಿ ಪಡೆಯದಿದ್ದರೂ ಖಾಸಗಿ ವೈದ್ಯಕೀಯ ಮಂಡಳಿಗಳ ಸರ್ಟಿಫಿಕೆಟ್‌ಗಳನ್ನು ಪಡೆದು ಗ್ರಾಮೀಣ ಭಾಗದ ಜನರಿಗೆ ತಾತ್ಕಾಲಿಕವಾಗಿ ಗುಣಮುಖವಾದರೂ ದುಷ್ಪರಿಣಾಮ ಬೀರುವ ಔಷಧಿಗಳನ್ನು ನೀಡಿ ವಂಚಿಸಲಾಗುತ್ತಿದೆ.

# ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ಮುಖ್ಯ ಕಾರ್ಯದರ್ಶಿಗೆ ದೂರು

## ಸಭೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳಿಗೆ ಹೆಚ್.ಡಿ.ರೇವಣ್ಣ ಎಚ್ಚರಿಕೆ

• ಪ್ರಜೋದಯ ವರದಿ



**ಹಾಸನ:** ರೈತರ ಸಮಸ್ಯೆಗಳಿಗೆ ಸ್ಪಂದಿಸಲು ವಿಫಲರಾಗಿರುವ ಅಧಿಕಾರಿಗಳು, ಹಣ ಉಳ್ಳವರ ಕಡತಗಳನ್ನು ತಕ್ಷಣ ವಿಲೇವಾರಿ ಮಾಡುತ್ತಾರೆ. ರೈತರ ಸಮಸ್ಯೆಗಳನ್ನು 15 ದಿನಗಳೊಳಗೆ ಪರಿಹರಿಸದಿದ್ದರೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಎಚ್ಚರಿಕೆ ನೀಡಿದರು.

ಸೋಮವಾರ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ವಿವಿಧ ಹೋಬಳಿಗಳಲ್ಲಿ 30 ರಿಂದ 40 ವರ್ಷಗಳಿಂದ ಪಹಣಿ, ದುರಸ್ತಿ, ಪೋಡಿ ಸೇರಿ ರೈತರ ಅನೇಕ ಸಮಸ್ಯೆಗಳು ಬಾಕಿ ಉಳಿದಿವೆ. ರೈತರು ಪ್ರತಿದಿನ ತಾಲ್ಲೂಕು ಕಚೇರಿಗೆ ಅಲೆದಾಡುತ್ತಾ ಬೇಸತ್ತಿದ್ದರೂ ತಾಲ್ಲೂಕು ಹಾಗು ಜಿಲ್ಲಾಡಳಿತ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆ ಕೆಲವು ಅಧಿಕಾರಿಗಳು ಹಣದ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರೈತರಿಗೆ ನ್ಯಾಯ ದೊರೆಯುವುದು ಹೇಗೆಂದು ಪ್ರಶ್ನಿಸಿದ ಅವರು, ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗು ತಹಶೀಲ್ದಾರ್‌ಗಳು ಮೊದಲ ಆದ್ಯತೆಯಾಗಿ ಕಂದಾಯ ಇಲಾಖೆಯ ಸಮಸ್ಯೆಗಳನ್ನು ಬಗೆಹರಿಸಬೇಕು. ತಿಂಗಳಿಗೆ ಒಮ್ಮೆ ಜನಸಂಪರ್ಕ ಸಭೆ ನಡೆಸುವುದರಿಂದ ಪ್ರಯೋಜನವಾಗುತ್ತಿಲ್ಲ. ಇದೇ ಸ್ಥಿತಿ ಮುಂದುವರಿದರೆ ಅಧಿಕಾರಿಗಳ ಅಕ್ರಮಗಳನ್ನು ಬಯಲು ಮಾಡುವುದಾಗಿ ಎಚ್ಚರಿಸಿದರು.

ತಾಲ್ಲೂಕು ಕಚೇರಿಯಲ್ಲಿ ಕೆಲವು ಅಧಿಕಾರಿಗಳು ಕಡತ ತಿದ್ದುಪಡಿ ಹಾಗು ಪ್ರಭಾವಿಗಳ ಕೆಲಸಗಳಿಗೆ ಮಾತ್ರ ಆದ್ಯತೆ ನೀಡುತ್ತಿದ್ದಾರೆ. ಹಾಸನ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸುತ್ತಮುತ್ತ ಭೂಮಿಗಳನ್ನು ಪ್ರಭಾವಿಗಳು ಖರೀದಿಸುತ್ತಿದ್ದು, ಇದರಿಂದ ಭವಿಷ್ಯದಲ್ಲಿ ಸಾಮಾನ್ಯ ಜನರಿಗೆ ಭೂಮಿ ಸಿಗದ ಪರಿಸ್ಥಿತಿ ಉಂಟಾಗಲಿದೆ. ಕೆಲ ಅಧಿಕಾರಿಗಳು ಭೂ ಮಾಫಿಯಾದೊಂದಿಗೆ ಕೈಜೋಡಿಸಿದ್ದಾರೆಂದು ಆರೋಪಿಸಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯಲ್ಲಿ ಸುಮಾರು 1,200 ಪ್ರಕರಣಗಳು ಬಾಕಿ ಇವೆ. ಹಾಸನ ತಾಲ್ಲೂಕಿನ ದುದ್ದ ಹಾಗು ಶಾಂತಿಗ್ರಾಮ ಭಾಗಗಳಲ್ಲಿಯೂ ಅನೇಕ ವರ್ಷಗಳಿಂದ ಸಮಸ್ಯೆಗಳು ಬಗೆಹರಿಯದೆ ಉಳಿದಿವೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಬೇಸಿಗೆ ಹಿನ್ನಲೆ ಕುಡಿಯುವ ನೀರು, ಪಶುಗಳಿಗೆ ಮೇವು ಹಾಗು ಇಂಧನ ಸಮಸ್ಯೆಗಳತ್ತ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಶೇಷ ಗಮನ ಹರಿಸಬೇಕೆಂದರು.

ಸಭೆಯ ವೇಳೆ ಸಾರ್ವಜನಿಕರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಹಲವು ವರ್ಷಗಳಿಂದ ತಮ್ಮ ಜಮೀನು ಪೋಡಿ ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದರೂ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರು. ಈ ವೇಳೆ ತಹಶೀಲ್ದಾರ್ ಗೀತಾ ಅವರು ಮೌನವಾಗಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಮತ್ತಷ್ಟು ಕಾರಣವಾಯಿತು.

### ಜಿಲ್ಲಾಧಿಕಾರಿ ವಿರುದ್ಧ ಆಕ್ರೋಶ

ಜಿಲ್ಲಾಧಿಕಾರಿ ಶಾಸಕರನ್ನು ಗೌರವಿಸುವ ಬದಲು ನಿರ್ಲಕ್ಷ್ಯ ತೋರುತ್ತಿದ್ದಾರೆ. ನನ್ನ ರಾಜಕೀಯ ಜೀವನದಲ್ಲಿ ಇಂತಹ ಅಧಿಕಾರಿಗಳನ್ನು ನೋಡಿಲ್ಲ. ರೈತರಿಗೆ ಕಾನೂನು ಬದ್ಧ ಸೇವೆ ನೀಡದಿದ್ದರೆ ಸಹಿಸುವುದಿಲ್ಲವೆಂದು ಹೆಚ್.ಡಿ.ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

# ನಿವೇಶನ ಸೆಟ್‌ಬ್ಯಾಕ್ ನಿಯಮ ಸಡಿಲಿಕೆಗೆ ಆಗ್ರಹ

## ನಾಗರಿಕರಿಂದ ಪ್ರತಿಭಟನೆ | ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ

• ಪ್ರಜೋದಯ ವರದಿ



**ಹಾಸನ :** ಹೊಸದಾಗಿ ಮನೆಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಚಿಕ್ಕ ನಿವೇಶನಗಳಿಗೂ ಅನ್ವಯ ಆಗಲಿರುವ ಸೆಟ್‌ಬ್ಯಾಕ್ ನಿಯಮಾವಳಿ ಸಡಿಲಿಕೆ ಮಾಡುವಂತೆ ಒತ್ತಾಯಿಸಿ ನಾಗರಿಕರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ನಗರಸಭೆ ಮಾಜಿ ಸದಸ್ಯ ಹೆಚ್.ಎಂ.ಸುರೇಶ್ ಕುಮಾರ್ ಅವರು, ಪ್ರಸ್ತುತ ಕಟ್ಟಡ ಪರವಾನಗಿ ಪಡೆಯಲು ವಿಧಿಸಿರುವ ಕಠಿಣ ನಿಯಮಗಳು, ವಿಶೇಷವಾಗಿ ಸೆಟ್‌ಬ್ಯಾಕ್ ನಿಯಮಾವಳಿಗಳಿಂದ ಸಾಮಾನ್ಯ ಹಾಗು ಮಧ್ಯಮ ವರ್ಗದ ಜನರಿಗೆ ತೊಂದರೆ ಆಗಲಿದೆ. ಜೀವನ ಪೂರ್ತಿ ದುಡಿದು ಸಂಗ್ರಹಿಸಿದ ಹಣದಿಂದ ತಮ್ಮ ಕನಸಿನ ಮನೆ ಕಟ್ಟಲು ಮುಂದಾಗುವ ಜನರಿಗೆ ಈ ನಿಯಮಗಳು ಅಡ್ಡಿಯಾಗುತ್ತಿವೆ ಎಂದು ದೂರಿದರು.

ಕಠಿಣ ನಿಯಮದಿಂದ ಹಲವರ ಕನಸುಗಳು ಅರ್ಧದಲ್ಲೇ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಟ್ಟಡ ನಿರ್ಮಾಣಕ್ಕೂ ಹಿನ್ನಡೆ ಆಗುತ್ತಿದೆ. ಇದರಿಂದ ದಿನಗೂಲಿ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವಂತಾಗಿದೆ. ಕಟ್ಟಡ ಕಾರ್ಮಿಕರು ಮಾತ್ರವಲ್ಲದೆ, ಸಿವಿಲ್ ಇಂಜಿನೀಯರ್‌ಗಳು, ಗುತ್ತಿಗೆದಾರರು, ಗಾರೆ ಕೆಲಸದವರು, ಟೈಲ್ಸ್ ಕೆಲಸಗಾರರು, ಮರ ಕೆಲಸದವರು, ಪ್ಲಂಬರ್‌ಗಳು, ಎಲೆಕ್ಟ್ರೀಷಿಯನ್‌ಗಳು

» ನಾಲ್ಕನೇ ಪುಟದಲ್ಲಿ

## ಮಾದಕ ವಸ್ತು ಸೇವನೆ: ಬಂಧನ

**ಹಾಸನ:** ಮಾದಕ ವಸ್ತು ಸೇವನೆ ಮಾಡಿ ಸಾರ್ವಜನಿಕ ಸ್ಥಳದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ತಾಲ್ಲೂಕಿನ ಅಣ್ಣಪ್ಪ ನಾಯ್ಕ (32) ಬಂಧಿತ ಆರೋಪಿ.

ದುದ್ದ ಪೊಲೀಸ್ ಠಾಣೆಯ ಪಿಎಸ್‌ಐ, ಸಿಬ್ಬಂದಿಯೊಂದಿಗೆ ಗಸ್ತು ತಿರುಗುತ್ತಿದ್ದ ಸಂದರ್ಭದಲ್ಲಿ ದುದ್ದ ಡಾಬಾ ಸರ್ಕಲ್ ಸಮೀಪ ಅನುಮಾನಾಸ್ಪದವಾಗಿ ನಿಂತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವೈದ್ಯಕೀಯ ವರದಿಯಲ್ಲಿ ಆತ ಅಮಲು ಬರುವ ಮಾದಕ ವಸ್ತುವನ್ನು ಸೇವಿಸಿರುವುದು ದೃಢಪಟ್ಟಿದೆ. ದುದ್ದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇಂದಿನಿಂದ ಕಾಲೇಜು ರಂಗ, ರಂಗ ಸುಗ್ಗಿ

• ಪ್ರಜೋದಯ ವರದಿ





**ಹಾಸನ:** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರದಿಂದ ಮೂರು ದಿನಗಳ ಕಾಲ ಕಾಲೇಜು ರಂಗ, ರಂಗ ಸುಗ್ಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರಂಗಕರ್ಮಿ ಶಾಡ್ರಾಕ್ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ನಾಟ್ಯವೈಭವ ಹಾಸನ, ರಂಗಸಿರಿ ವತಿಯಿಂದ 4ನೇ ವರ್ಷದ ರಂಗಸುಗ್ಗಿ ಹಮ್ಮಿಕೊಳ್ಳಲಾಗಿದೆ. ನೀನಾಸಂನಲ್ಲಿ ತರಬೇತಿ ಪಡೆದಿರುವವರು ಆಗಮಿಸಿ ವಿದ್ಯಾರ್ಥಿಗಳಿಗೆ ರಂಗ ಕಲೆ ಬಗ್ಗೆ ತರಬೇತಿ ನೀಡಲಿದ್ದಾರೆ ಎಂದರು.

ಏ.14 ರಂದು ಮಧ್ಯಾಹ್ನ 1 ಗಂಟೆಗೆ ಜ್ಞಾನಧಾರ ಪ್ಯಾರಾಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಂದ ನನ್ನ ಅಂಬೇಡ್ಕರ್ ನಾಟಕ ಪ್ರದರ್ಶನಗೊಳ್ಳಲಿದೆ. ಕೋಟಿಗಾನಹಳ್ಳಿ ರಾಮಯ್ಯ ರಚನೆ ಮಾಡಿದ್ದು, ಬಾಬಾ ಸಾಹೇಬ್ ಕಾಂಬಳೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಏ.15 ರಂದು ಬೆಳಗ್ಗೆ 10 ಗಂಟೆಗೆ ಸರ್ಕಾರಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಿಂದ ಲೋಕಾಯುಕ್ತರು ಬರುತ್ತಿದ್ದಾರೆ. ಮೂಲ ನಿಕೊಲಾಯ್ ಗೊಗೋಲ್ ನಾಟಕವನ್ನು ಕನ್ನಡಕ್ಕೆ ಧನಂಜಯ ದಿಯಾನ್ ತಂದಿದ್ದಾರೆ. ಅದೇ ದಿನ ಮಧ್ಯಾಹ್ನ 12 ಗಂಟೆಗೆ ಡಾ.ಎಂ.ಬೈರೇಗೌಡ ರಚಿಸಿರುವ ಮಂಜು ಸಿರಿಗೆರೆ ನಿರ್ದೇಶನ ಮಾಡಿರುವ ಸರಸತಿಯಾಗಲೊಲ್ಲೆ ನಾಟಕವನ್ನು ಸರ್ಕಾರಿ ಪ್ರಥಮ ದರ್ಜೆ

» ನಾಲ್ಕನೇ ಪುಟದಲ್ಲಿ

## ಯಾವ ಮುಸ್ಲಿಂ ನಾಯಕರು ನನ್ನ ಸಂಪರ್ಕದಲ್ಲಿಲ್ಲ : ಹೆಚ್.ಡಿ.ಕೆ.



**ಬೆಂಗಳೂರು :** ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿರುವ ಯಾವೊಬ್ಬ ಅಲ್ಪಸಂಖ್ಯಾತ ನಾಯಕರೂ ನನ್ನ ಸಂಪರ್ಕದಲ್ಲಿ ಇಲ್ಲವೆಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ಒಂದು ವೇಳೆ ನನ್ನ ಸಂಪರ್ಕಕ್ಕೆ ಬಂದರೆ ನಮ್ಮ ಪಕ್ಷದ ಹಿರಿಯ ನಾಯಕರ ಜೊತೆ ಚರ್ಚಿಸಿ ಸಾಧಕ ಬಾಧಕಗಳನ್ನು ಪರಿಶೀಲಿಸಿ, ನಿರ್ಧಾರ ಕೈಗೊಳ್ಳುತ್ತೇನೆ. ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳ ಬಗ್ಗೆ ಕೇಳಿದ ಪ್ರಶ್ನೆಗೆ, ನಾನು ಈ ಬೆಳವಣಿಗೆಗಳನ್ನು ಮಾಧ್ಯಮಗಳಲ್ಲಿ ಗಮನಿಸಿದೆ. ಸಮಸ್ಯೆ ಸರಿ ಮಾಡಿಕೊಳ್ಳುವುದು ಅಥವಾ ಬಿಡುವುದು ಆ ಪಕ್ಷಕ್ಕೆ ಬಿಟ್ಟದ್ದು. ಆ ಪಕ್ಷದ ನಾಯಕರ ಹೊಡೆದಾಟದ ಬಗ್ಗೆ ನಾನು ಚರ್ಚೆ ಮಾಡಲು ಹೋಗುವುದಿಲ್ಲ ಎಂದರು. ಈ ಕ್ಷೇತ್ರದಲ್ಲಿ ಜನ ಸಮುದಾಯ ಏನು ತೀರ್ಮಾನ ಮಾಡುತ್ತದೆ ಎಂದು ನೋಡೋಣವೆಂದು ಹೇಳಿದರು.

## ಸರ್ಕಾರಕ್ಕೆ ಹೆಚ್.ಡಿ.ದೇವೇಗೌಡರ ಪತ್ರ: ಸಚಿವರಿಗೆ ತಲುಪಿಸಿದ ಹೆಚ್.ಡಿ.ರೇವಣ್ಣ

# ಐಐಟಿ-ಕೇಂದ್ರೀಯ ವಿವಿ ಸ್ಥಾಪನೆಗೆ ಜಮೀನು ಕಾಯ್ದಿರಿಸಿ

• ಪ್ರಜೋದಯ ವರದಿ



**ಹಾಸನ:** ನಗರದಲ್ಲಿ ಐಐಟಿ ಸ್ಥಾಪನೆ ಹಾಗು ಇತರೆ ಕೇಂದ್ರೀಯ ವಿಶ್ವ ವಿದ್ಯಾಲಯಗಳ ಸ್ಥಾಪನೆಗೆ ಕೆಐಎಡಿಬಿ ವತಿಯಿಂದ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯನ್ನು ಅದೇ ಉದ್ದೇಶಕ್ಕೆ ಮೀಸಲಿಟ್ಟು ಆದೇಶ ಹೊರಡಿಸುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಅವರಿಗೆ ಪತ್ರ ಬರೆದಿದ್ದಾರೆ.

1057 ಎಕರೆ ಜಮೀನು ಪೈಕಿ 100 ಎಕರೆಯಷ್ಟು ಜಮೀನಿನಲ್ಲಿ ಕೈಗಾರಿಕಾ ವಲಯದ ಯೋಜನೆ ರಚಿಸಿ ಅನುಷ್ಠಾನಗೊಳಿಸುತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಟೆಂಡರ್ ಪ್ರಕ್ರಿಯೆ ರದ್ದುಪಡಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದು ಐಐಟಿ ಸ್ಥಾಪನೆಗೆ ಹಾಗೂ ಇತರೆ ಕೇಂದ್ರೀಯ ವಿವಿ ಸ್ಥಾಪನೆಗೆ ಸ್ವಾಧೀನವಾಗಿರುವ ಜಮೀನು ಕಾಯ್ದಿರಿಸಬೇಕೆಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ನಗರದಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕೆಐಎಡಿಬಿ ಮೂಲಕ ತಾಲ್ಲೂಕಿನ ಬೂವನಹಳ್ಳಿ ಹಾಗು ಮತ್ತಿತರೆ ಗ್ರಾಮಗಳ ಸ.ನಂ ಮತ್ತು ಸರ್ಕಾರಿ ಖರಾಬು ಸೇರಿ 1224 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ ನಡೆಸಿ, ಈ ಪೈಕಿ 536 ಎಕರೆ ಜಮೀನು ಸ್ವಾಧೀನ ಪಡಿಸಿಕೊಂಡು ವಿಮಾನ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿದೆ.

ಉಳಿಕೆ ಜಮೀನಿನಲ್ಲಿ ಭೂ ಸ್ವಾಧೀನ ಅಂತಿಮ ಪ್ರಕ್ರಿಯೆಯಲ್ಲಿರುವ 2008 ರ ಜೆಎಂಸಿ ವರದಿಯಂತೆ ಅಧಿಸೂಚನೆ ಹೊರಡಿಸಿರುವ 420 ಎಕರೆ ಭೂಮಿ ಪೈಕಿ ಕೈ ಬಿಟ್ಟಿರುವ 231 ಎಕರೆ ಜಮೀನನ್ನು ಈ ಹಿಂದಿನಂತೆಯೇ ಭೂ ಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸಲು ಹಾಗು 2019 ಜ.17 ರಂದು ಭೂ ಸ್ವಾಧೀನವಾಗಿರುವ 189 ಎಕರೆ ಮತ್ತು 30 ಎಕರೆ, ಒಟ್ಟಾರೆ 219 ಎಕರೆ ಜಮೀನಲ್ಲಿ 19 ಎಕರೆ ಜಮೀನು ಹೊರತುಪಡಿಸಿ, ರಿಯಲ್ ಎಸ್ಟೇಟ್‌ನವರೊಂದಿಗೆ ಕಂದಾಯ ಇಲಾಖಾಧಿಕಾರಿಗಳು ಶಾಮೀಲಾಗಿ ಮೂಲ ಪ್ರಸ್ತಾವನೆಯನ್ನು ಮಾರ್ಪಡಿಸಿ 199 ಎಕರೆ ಜಮೀನುಗಳನ್ನು ಡಿನೋಟಿಫೈ ಮಾಡಲು ಕೈಗೊಂಡಿರುವ ಸರ್ಕಾರದ ನಿರ್ಣಯಗಳನ್ನು ಮತ್ತು ಕೆಐಎಡಿಬಿ ವತಿಯಿಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಜಮೀನುಗಳನ್ನು ಹಾಸನ ವಿಮಾನ ನಿಲ್ದಾಣದ ಯೋಜನೆಗೆ ಸ್ವಾಧೀನಪಡಿಸಿಕೊಂಡು ಮೂಲ ಯೋಜನೆಯಂತೆಯೇ ನಿಲ್ದಾಣ ಕಾಮಗಾರಿಗಳನ್ನು ಮುಂದುವರಿಸಬೇಕೆಂದು ಮನವಿ ಮಾಡಿದ್ದಾರೆ.

ಹಾಸನ ವಿಮಾನ ನಿಲ್ದಾಣವನ್ನು ಪ್ರಾಥಮಿಕ ಹಂತದಲ್ಲಿ ಶಿವಮೊಗ್ಗಾ ಗ್ರೀನ್ ಫೀಲ್ಡ್ ಏರ್ ಪೋರ್ಟ್ ಮಾದರಿಯಲ್ಲಿ ವಿಮಾನ ನಿಲ್ದಾಣವನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಬೇಕೆಂದಿದ್ದಾರೆ. ಈ ಪತ್ರವನ್ನು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಎಂ.ಬಿ.ಪಾಟೀಲ್ ಅವರಿಗೆ ಸಲ್ಲಿಸಿ, ದೇವೇಗೌಡರ ಪತ್ರದ ಪ್ರಕಾರ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

## ಪ್ರತ್ಯೇಕ ಅಪಘಾತ: ಮೂವರು ಸಾವು

• ಪ್ರಜೋದಯ ವರದಿ

**ಹಾಸನ:** ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಮೂವರು ಸಾವನ್ನಪ್ಪಿರುವ ಘಟನೆ ಹಾಸನ ಸಂಚಾರಿ ಪೊಲೀಸ್ ಠಾಣೆ ಹಾಗು ಬೇಲೂರು ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಹಾಸನ-ಅರಕಲಗೂಡು ರಸ್ತೆಯ ಬಿಟ್ಟಗೌಡನಹಳ್ಳಿ ಸಮೀಪ ದೇವೇಗೌಡ ನಗರದ ನಿವಾಸಿ ವಿನಯ್ ಕುಮಾರ್ (38) ಅವರು ತಮ್ಮ ಟಿವಿಎಸ್ ಜುಪೀಟರ್ ಸ್ಕೂಟರ್‌ನಲ್ಲಿ ನಗರಕ್ಕೆ ತೆರಳುತ್ತಿದ್ದ ವೇಳೆ ಎದುರಿಗೆ ಬಂದ ಮತ್ತೊಂದು ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟಿದ್ದಾರೆ.

ಹಾಸನ-ಅರಸೀಕೆರೆ ರಸ್ತೆಯ ಎಸ್‌ಎಂಕೆ ಬಡಾವಣೆ ಸಮೀಪ ಲಾಲನಕೆರೆ ಗ್ರಾಮದ ಆದಿತ್ಯ (22) ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಗ್ರಾಮಕ್ಕೆ ಹಿಂದಿರುಗುವಾಗ ಬೈಕ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಅಪಘಾತದ ಪರಿಣಾಮ ತಲೆಗೆ ಗಂಭೀರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೇಲೂರು ತಾಲ್ಲೂಕಿನ ದರ್ಗಾ ಸಮೀಪದ ಬೇಲೂರು-ಬಿಕ್ಕೋಡು ರಸ್ತೆಯಲ್ಲಿ ಹಿರೆಕೊಲೆ ಗ್ರಾಮದ ನಾಗರಾಜು (77) ಅವರು ಟಿವಿಎಸ್ ಎಕ್ಸ್‌ಎಲ್ ಸೂಪರ್ ಬೈಕ್‌ನಲ್ಲಿ ದಿನಸಿ ಸಾಮಗ್ರಿಗಳನ್ನು ತೆಗೆದುಕೊಂಡು ಗ್ರಾಮಕ್ಕೆ ತೆರಳುವಾಗ ಬೈಕ್ ನಿಯಂತ್ರಣ ತಪ್ಪಿ ಬಿದ್ದು

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.
ದೂರವಾಣಿ ಸಂಖ್ಯೆ: 268876, 266719,
ನಂ: ಹಾನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಬಿ.ನಿ/ಇ-ಹರಾಜು/ಪ್ರಕಟಣೆ/01/2026-27
ದಿನಾಂಕ:09.04.2026

**ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನಗಳು, ವಾಣಿಜ್ಯ ನಿವೇಶನಗಳು ಮತ್ತು ಮಧ್ಯಂತರ ವಸತಿ ಬಿಡಿ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ**

ಇ-ಹರಾಜನ್ನು ಆರಂಭಿಸುವ ದಿನಾಂಕ:23.04.2026 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ.ಎಂ.ಡಿ. ಮೊತ್ತದೊಂದಿಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:22.05.2026 ಭಾರತೀಯ ಕಾಲಮಾನ 17.00 ಗಂಟೆ ವರೆಗೆ ಕ್ರಮ ಸಂಖ್ಯೆ:01 ರಿಂದ 22 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:25.05.2026ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:23 ರಿಂದ 44 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:26.05.2026 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10,000/-ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕಾಗಿ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳು (ಕ್ರ.ಸಂ. 01 ರಿಂದ 22)

| ಕ್ರ. ಸಂ | ನಿವೇಶನ ಸಂಖ್ಯೆ ಮೂಲೆ ನಿವೇಶನ | Site Facing of roads | ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | ವಿಸ್ತೀರ್ಣ ಚ.ಮೀ | ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/- |
|---|---|---|---|---|---|---|
| 1 | 1 | S-E | (15.00+17.00)/2 | (4.80+12.80)/2 | 140.80 | 3408750 |
| 2 | 22 | S-E | (6.90+12.10)/2 | (12.10+13.10)/2 | 113.40 | 2745000 |
| 3 | 46 | S-W | (12.00+13.00)/2 | (6.80+12.10)/2 | 118.13 | 2859927 |
| 4 | 2038 | S-W | (11.40+17.30)/2 | (12.00+13.10)/2 | 172.20 | 4169250 |
| 5 | 2371 | S-W | (15.50+26.50)/2 | (18.00+21.40)/2 | 369.00 | 8932500 |
| 6 | 2372 | S-E | (7.30+15.50)/2 | (12.00+14.30)/2 | 136.80 | 3312000 |
| 7 | 3750 | S-E | (12.50+16.70)/2 | (18.00+18.50)/2 | 262.80 | 6363000 |
| 8 | 3762 | N-E | (20.60+16.60)/2 | (18.10+18.10)/2 | 336.66 | 8149500 |
| 9 | 4476 | N-E | (19.80+16.60)/2 | (18.30+18.00)/2 | 330.33 | 7997289 |

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 10 ರಿಂದ 22)

| ಕ್ರ. ಸಂ | ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ | Site Facing of roads | ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | ವಿಸ್ತೀರ್ಣ ಚ.ಮೀ | ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/- |
|---|---|---|---|---|---|---|
| 10 | 6356 | N-E | 41.90+9.20/2 | 47.70+35.60/2 | 887.58 | 31037500 |
| 11 | 6365 | East | 25.00+42.55/2 | 27.20+35.00/2 | 1050.40 | 36731500 |
| 12 | 6369 | East | 58.00+39.60/2 | 27.00+25.30/2 | 1234.64 | 43175340 |
| 13 | 6370 | N-S | 30.10+13.00/2 | 25.00+18.30/2 | 394.36 | 13789750 |
| 14 | 6396 | S-E | 15.25+34.90/2 | 25.20+32.90/2 | 631.89 | 22096750 |
| 15 | 6408 | N-W | 25.60+21.20/2 | 33.00+32.50/2 | 760.50 | 26594750 |
| 16 | 6409 | West | 23.30 | 32.50 | 757.25 | 26481033 |
| 17 | 6410 | West | 23.30 | 32.50 | 757.25 | 26481033 |
| 18 | 6411 | West | 23.30 | 32.50 | 757.25 | 26481033 |
| 19 | 6413 | West | 18.30 | 32.40 | 592.92 | 20735000 |
| 20 | 6414 | West | 18.30 | 32.40 | 592.92 | 20735000 |
| 21 | 6419 | West | 24.75 | 29.00 | 717.75 | 25099750 |
| 22 | 6420 | West | 24.75 | 30.10 | 744.97 | 26051775 |

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳು ಮತ್ತು ವಸತಿ ಬಿಡಿ ಮಧ್ಯಂತರ ನಿವೇಶನಗಳು (ಕ್ರ.ಸಂ. 23 ರಿಂದ 44)

| ಕ್ರ. ಸಂ | ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ | Site Facing of roads | ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | ವಿಸ್ತೀರ್ಣ ಚ.ಮೀ | ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/- |
|---|---|---|---|---|---|---|
| 23 | 6425 | S-W | 16.90+47.10/2 | 32.00+44.60/2 | 1024.00 | 35808500 |
| 24 | 7/1 | N, S, W | 18.00 | 33.00 | 594.00 | 20772180 |
| 25 | 7/2 | North | 15.00 | 18.00 | 270.00 | 9441900 |
| 26 | 7/3 | North | 15.00 | 18.00 | 270.00 | 9441900 |
| 27 | 7/4 | North | 12.00 | 18.00 | 216.00 | 7553520 |
| 28 | 7/5 | North | 12.00 | 18.00 | 216.00 | 7553520 |
| 29 | 7/6 | South | 12.00 | 15.00 | 180.00 | 6294600 |
| 30 | 7/7 | South | 12.00 | 18.00 | 216.00 | 7553520 |
| 31 | 7/8 | South | 15.00 | 15.00 | 225.00 | 7868250 |
| 32 | 7/9 | South | 15.00 | 15.00 | 225.00 | 7868250 |
| 33 | 10/1 | North (24m road) West (24m road circle) | Odd site | Odd site | 804.55 | 28135114 |
| 34 | 10/2 | S-W 12m road) | 18.20 | 18.00 | 327.60 | 11456172 |
| 35 | 10/3 | South (12m road) | 12.00 | 18.00 | 216.00 | 7553520 |
| 36 | 10/4 | South (12m road) | 12.00 | 18.00 | 216.00 | 7553520 |
| 37 | 11/1 | N-E | 72.00 | 57.00 | 4104.00 | 143516880 |
| 38 | 11/2 | S-E | 18.00 | 24.00 | 432.00 | 15107040 |
| 39 | 11/3 | South | 18.00 | 24.00 | 432.00 | 15107040 |
| 40 | 11/4 | South | 18.00 | 24.00 | 432.00 | 15107040 |
| 41 | 11/5 | South | 18.00 | 24.00 | 432.00 | 15107040 |

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ವಸತಿ ಬಿಡಿ ನಿವೇಶನಗಳ ವಿವರಗಳು (ಕ್ರ.ಸಂ. 42 ರಿಂದ 44)

| ಕ್ರ. ಸಂ | ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ | Site Facing of roads | ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | ವಿಸ್ತೀರ್ಣ ಚ.ಮೀ | ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/- |
|---|---|---|---|---|---|---|
| 42 | 4907 | South | (12.00+11.40)/2 | (9.00+12.20)/2 | 124.02 | 2668900 |
| 43 | 4932 | North | 23.00+23.50/2 | 8.20.8.60/2 | 194.14 | 4178000 |
| 44 | 1148 | West | 28.85 | 9.00 | 259.65 | 5587668 |

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:- 1.ಇ-ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು. 2.ಪಾನ್ ಕಾರ್ಡ್ (PAN Card, Aadhar Card) ಲಗತ್ತಿಸುವುದು. 3.ಇ-ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣಿಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

6.ಇ.ಎಂ.ಡಿ.ಮೊತ್ತ ರೂ.50,000/- & ರೂ.1,00,000/-ಗಳನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25%ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/- ಮತ್ತು ರೂ.1,00,000/-ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ.

Beneficiary Name: Commissioner, Hassan Urban Development Authority, Hassan (HUDA)

| ಕ್ರಸಂ. | ಬ್ಯಾಂಕ್ ಹೆಸರು | ಖಾತೆ ಸಂಖ್ಯೆ | ಐ.ಎಫ್.ಎಸ್.ಸಿ. ಕೋಡ್ |
|---|---|---|---|
| 1 | ಬ್ಯಾಂಕ್ ಆಫ್ ಬರೋಡ, ಹುಡಾ ಶಾಖೆ, ಬಿ.ಎಂ.ರಸ್ತೆ, ಹಾಸನ | 74730100000418 | BARBOVJHUDA (ZERO) |

8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ-ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ, ಮೂಲೆ, ವಾಣಿಜ್ಯ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ದುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ-ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ-ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 44 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/- ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ-ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-22230960, 080-22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ದುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ದುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:- 1)ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ: 9845827558 2) ಕಾರ್ಯದರ್ಶಿಗಳು ಮೊ:7483179415 3) ನಗರ ಯೋಜಕರು ಮೊ:9741938357, 4) ಮೊ:9844740640,

ಸಹಿ/- (ಕೆ.ಎಂ.ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ಸಹಿ/- (ಪಟೇಲ್ ಶಿವಣ್ಣ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/29/ಕೆಎಸ್‌ಎಂಸಿಎ/2026-27

# ಸಮಾನತೆಯ ಹರಿಕಾರ ಅಂಬೇಡ್ಕರ್

**ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆ: ಇತಿಹಾಸ, ಪ್ರಮುಖ ಕೊಡುಗೆಗಳು ಮತ್ತು ಸಾಧನೆಗಳು**

ಬಾಬಾ ಸಾಹೇಬ್ ಅಂಬೇಡ್ಕರ್ ಎಂದೇ ಪ್ರೀತಿಯಿಂದ ಕರೆಯಲ್ಪಡುವ ಡಾ. ಬಿ.ಆರ್. ಅಂಬೇಡ್ಕರ್ ಒಬ್ಬ ದಾರ್ಶನಿಕ ನಾಯಕ, ಸಾಮಾಜಿಕ ಸುಧಾರಕ ಮತ್ತು ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿ. ಏಪ್ರಿಲ್ 14, 1891 ರಂದು ಮಧ್ಯಪ್ರದೇಶದ ಮಾವ್‌ನಲ್ಲಿ ಜನಿಸಿದ ಅವರು ತೀವ್ರ ಜಾತಿ ತಾರತಮ್ಯವನ್ನು ಎದುರಿಸಿದರು ಆದರೆ ತಮ್ಮ ಗಮನಾರ್ಹ ಶೈಕ್ಷಣಿಕ ಸಾಧನೆಗಳ ಮೂಲಕ ಈ ಸವಾಲುಗಳನ್ನು ಜಯಿಸಿದರು. ಸಾಮಾಜಿಕ ಸಮಾನತೆ ಮತ್ತು ನ್ಯಾಯಕ್ಕಾಗಿ ದೃಢವಾದ ವಕೀಲರಾಗಿದ್ದ ಅಂಬೇಡ್ಕರ್, ಜಾತಿ ಆಧಾರಿತ ದಬ್ಬಾಳಿಕೆಯ ವಿರುದ್ಧ ಹೋರಾಡಲು ಮತ್ತು ಅಂಚಿನಲ್ಲಿರುವ ಸಮುದಾಯಗಳನ್ನು ಮೇಲಕ್ಕೆತ್ತಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು.

**ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರ ಇತಿಹಾಸದ ಬಗ್ಗೆ ತಿಳಿಯಿರಿ**

ಡಾ. ಬಿ.ಆರ್. ಅಂಬೇಡ್ಕರ್ ಅವರು ಏಪ್ರಿಲ್ 14, 1891 ರಂದು ಮಧ್ಯಪ್ರದೇಶದ ಮ್ಹೋವ್‌ನಲ್ಲಿ ದಲಿತ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ರಾಮ್‌ಜಿ ಮಕೋಜಿ ಸಕ್ಪಾಲ್ ಬ್ರಿಟಿಷ್-ಭಾರತೀಯ ಸೇನೆಯಲ್ಲಿ ಸೇನಾ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು, ಆದರೆ ಅವರ ತಾಯಿ ಭೀಮಾಬಾಯಿ ಸಕ್ಪಾಲ್ ಗೃಹಿಣಿಯಾಗಿದ್ದರು. ಭೀಮರಾವ್ ಅವರ ಹೆತ್ತವರ ಹದಿನಾಲ್ಕನೇ ಮಗು. ಈ ಕುಟುಂಬವು ಮೂಲತಃ ಇಂದಿನ ಮಹಾರಾಷ್ಟ್ರದ ಅಂಬಾವಾಡೆ ಎಂಬ ಪಟ್ಟಣದವರಾಗಿತ್ತು.

**ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಶಿಕ್ಷಣ ಮತ್ತು ಬಾಲ್ಯದ ತಾರತಮ್ಯ**

ದಲಿತರಾಗಿ, ಅಂಬೇಡ್ಕರ್ ಚಿಕ್ಕ ವಯಸ್ಸಿನಿಂದಲೇ ಗಮನಾರ್ಹ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯವನ್ನು ಅನುಭವಿಸಿದರು. ಶಾಲೆಯಲ್ಲಿ, ಅವರು ಮತ್ತು ಇತರ ದಲಿತ ಮಕ್ಕಳನ್ನು ಉನ್ನತ ಜಾತಿಯ ವಿದ್ಯಾರ್ಥಿಗಳಿಂದ ಪ್ರತ್ಯೇಕಿಸಲಾಯಿತು. ಸಮಾನ ಆಸನ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಪ್ರವೇಶ ಸೇರಿದಂತೆ ಅವರಿಗೆ ಒಂದೇ ರೀತಿಯ ಸವಲತ್ತುಗಳನ್ನು ನಿರಾಕರಿಸಲಾಯಿತು. ಶಿಕ್ಷಕರು ಅವರತ್ತ ವಿರಳವಾಗಿ ಗಮನ ಹರಿಸುತ್ತಿದ್ದರು ಮತ್ತು ಅವರು ಸಾಮುದಾಯಿಕ ಸರಬರಾಜುಗಳನ್ನು ಮುಟ್ಟಲು ಅನುಮತಿಸದ ಕಾರಣ ನೀರು ಒದಗಿಸಲು ಪ್ಯೂನ್ ಅನ್ನು ಹೆಚ್ಚಾಗಿ ಅವಲಂಬಿಸುತ್ತಿದ್ದರು. ಈ ಸವಾಲುಗಳ ಹೊರತಾಗಿಯೂ, ಪ್ರೌಢಶಾಲೆಗೆ ಮುನ್ನಡೆದ ಅವರ ಒಡಹುಟ್ಟಿದವರಲ್ಲಿ ಅಂಬೇಡ್ಕರ್ ಮಾತ್ರ ಒಬ್ಬರು.

**ಹೆಸರು ಬದಲಾವಣೆ ಮತ್ತು ಆರಂಭಿಕ ಸಾಧನೆಗಳು**

ಪ್ರೌಢಶಾಲೆಯಲ್ಲಿದ್ದಾಗ, ಅವರ ಬ್ರಾಹ್ಮಣ ಶಿಕ್ಷಕರಲ್ಲಿ ಒಬ್ಬರು ಶಾಲಾ ದಾಖಲೆಗಳಲ್ಲಿ ತಮ್ಮ ಉಪನಾಮವನ್ನು ಅಂಬಾದವೇಕರ್‌ನಿಂದ ಅಂಬೇಡ್ಕರ್ ಎಂದು ಬದಲಾಯಿಸಿಕೊಂಡರು, ಇದು ಆ ಸಮಯದಲ್ಲಿ ಪ್ರಚಲಿತದಲ್ಲಿದ್ದ ಜಾತಿ ಆಧಾರಿತ ತಾರತಮ್ಯವನ್ನು ಪ್ರತಿಬಿಂಬಿಸುತ್ತದೆ. ಆದಾಗ್ಯೂ, ಅಂಬೇಡ್ಕರ್ ಶೈಕ್ಷಣಿಕವಾಗಿ ಶ್ರೇಷ್ಠರಾಗಿದ್ದರು. 1897 ರಲ್ಲಿ, ಅವರು ಎಲ್ಫಿನ್‌ಸ್ಟೋನ್ ಪ್ರೌಢಶಾಲೆಗೆ ದಾಖಲಾದ ಮೊದಲ ದಲಿತ ವಿದ್ಯಾರ್ಥಿಯಾದರು.

**ಮದುವೆ ಮತ್ತು ಕಾಲೇಜು ಶಿಕ್ಷಣ**

1906 ರಲ್ಲಿ, 15 ನೇ ವಯಸ್ಸಿನಲ್ಲಿ, ಅಂಬೇಡ್ಕರ್ ರಮಾಬಾಯಿ ಅವರನ್ನು ವಿವಾಹವಾದರು, ಆಗ ಅವರಿಗೆ ಕೇವಲ 9 ವರ್ಷ ವಯಸ್ಸಾಗಿತ್ತು - ಅವರ ಪೋಷಕರು ಚಾಲ್ತಿಯಲ್ಲಿರುವ ಪದ್ಧತಿಗಳಿಗೆ ಅನುಗುಣವಾಗಿ ಮದುವೆಯನ್ನು ಏರ್ಪಡಿಸಿದರು. 1912 ರಲ್ಲಿ, ಅಂಬೇಡ್ಕರ್ ಬಾಂಬೆ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ಪದವಿ ಪಡೆದರು. ನಂತರ ಅವರು ಬರೋಡಾ ರಾಜ್ಯ ಸರ್ಕಾರದಲ್ಲಿ ಹುದ್ದೆಯನ್ನು ವಹಿಸಿಕೊಂಡರು, ಇದು ಅವರ ವೃತ್ತಿಪರ ವೃತ್ತಿಜೀವನದ



ಆರಂಭವನ್ನು ಗುರುತಿಸಿತು.

**ಉನ್ನತ ಅಧ್ಯಯನ ಮತ್ತು ಅಂತರರಾಷ್ಟ್ರೀಯ ಸಾಧನೆಗಳು**

1913 ರಲ್ಲಿ, ಅಂಬೇಡ್ಕರ್ ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮುಂದುವರಿಸಲು ಬರೋಡಾದ ಸಯಾಜಿರಾವ್ ಗಾಯಕ್ವಾಡ್ ಅವರಿಂದ ವಿದ್ಯಾರ್ಥಿವೇತನವನ್ನು ಪಡೆದರು. ಅವರು 1915 ರಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ ಮತ್ತು ಮಾನವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಅವರು ರೂಪಾಯಿಯ ಸಮಸ್ಯೆ: ಅದರ ಮೂಲ ಮತ್ತು ಪರಿಹಾರ ಎಂಬ ತಮ್ಮ ಪ್ರಬಂಧವನ್ನು ಪೂರ್ಣಗೊಳಿಸಿದರು ಮತ್ತು 1923 ರಲ್ಲಿ ಲಂಡನ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಡಿ.ಎಸ್ಸಿ ಪಡೆದರು.

**ಯಶಸ್ಸಿನ ಹೊರತಾಗಿಯೂ ತಾರತಮ್ಯ ಮುಂದುವರಿಸುವುದು**

ಅಂಬೇಡ್ಕರ್ ಭಾರತಕ್ಕೆ ಹಿಂದಿರುಗಿದರೂ ಅವರು ಎದುರಿಸಿದ ಜಾತಿ ಆಧಾರಿತ ಪೂರ್ವಾಗ್ರಹ ಕೊನೆಗೊಂಡಿಲ್ಲ. ಅವರ ಉನ್ನತ ಪದವಿಗಳು ಮತ್ತು ಗಮನಾರ್ಹ ಸಾಧನೆಗಳ ಹೊರತಾಗಿಯೂ, ಬರೋಡಾ ರಾಜನ ರಕ್ಷಣಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾಗಲೂ ಸಹ, ಅವರನ್ನು ಮೇಲ್ಜಾತಿಯ ಅಧಿಕಾರಿಗಳು ಅಸ್ಪೃಶ್ಯರಂತೆ ನಡೆಸಿಕೊಳ್ಳುತ್ತಲೇ ಇದ್ದರು.

**ನಂತರದ ಜೀವನ ಮತ್ತು ಪರಂಪರೆ**

ಅಂಬೇಡ್ಕರ್ ಅವರ ತಾರತಮ್ಯದ ಅನುಭವಗಳು ಜಾತಿ ವ್ಯವಸ್ಥೆಯ ವಿರುದ್ಧ ಅವರ ಜೀವಮಾನದ ಹೋರಾಟಕ್ಕೆ ಉತ್ತೇಜನ ನೀಡಿದವು. ಅವರು ಪ್ರಮುಖ ನಾಯಕ ಮತ್ತು ಸಾಮಾಜಿಕ ಸುಧಾರಣೆಯ ಪ್ರತಿಪಾದಕರಾದರು, ದಲಿತರು ಮತ್ತು ಇತರ ಅಂಚಿನಲ್ಲಿರುವ ಗುಂಪುಗಳಿಗೆ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಭಾರತದ ಸಾಮಾಜಿಕ ಮತ್ತು ರಾಜಕೀಯ ಭೂದೃಶ್ಯಕ್ಕೆ ಅವರ ಕೊಡುಗೆಗಳು ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇವೆ.

**ಸ್ವಾತಂತ್ರ್ಯದ ಸಮಯದಲ್ಲಿ ಅಂಬೇಡ್ಕರ್ ಅವರ ಭಾಗವಹಿಸುವಿಕೆ**

ಭಾರತದ ಸ್ವಾತಂತ್ರ್ಯದ ಪ್ರಚಾರ ಮತ್ತು ಮಾತುಕತೆಯಲ್ಲಿ ಅಂಬೇಡ್ಕರ್ ತೊಡಗಿಸಿಕೊಂಡಿದ್ದರು. ಸ್ವಾತಂತ್ರ್ಯದ ನಂತರ, ಅವರು ಭಾರತೀಯ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾದರು. ಭಾರತದ ಸ್ವಾತಂತ್ರ್ಯದ ನಂತರ, ಅವರು ಮೊದಲ ಕಾನೂನು ಮತ್ತು ನ್ಯಾಯ ಸಚಿವರಾಗಿದ್ದರು ಮತ್ತು ಭಾರತದ ಸಂವಿಧಾನದ ಶಿಲ್ಪಿ ಎಂದು ಪರಿಗಣಿಸಲಾಗಿದೆ. 1956 ರಲ್ಲಿ ಅವರು ಬೌದ್ಧಧರ್ಮಕ್ಕೆ ಮತಾಂತರಗೊಂಡರು, ಇದರ ಪರಿಣಾಮವಾಗಿ ದಲಿತರ ಸಾಮೂಹಿಕ ಮತಾಂತರವಾಯಿತು. 1948 ರಲ್ಲಿ, ಅಂಬೇಡ್ಕರ್ ಮಧುಮೇಹದಿಂದ ಬಳಲುತ್ತಿದ್ದರು. ಸುಮಾರು ಏಳು ವರ್ಷಗಳ ಕಾಲ ಮಧುಮೇಹದ ವಿರುದ್ಧ ಹೋರಾಡಿದ ನಂತರ, ಅಂಬೇಡ್ಕರ್ ಡಿಸೆಂಬರ್ 6, 1956 ರಂದು ತಮ್ಮ ಮನೆಯಲ್ಲಿ ನಿದ್ರೆಯಲ್ಲಿ ನಿಧನರಾದರು.

★ 1935 ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರಚನೆಯಲ್ಲಿ ಅಂಬೇಡ್ಕರ್ ಪ್ರಮುಖ ಪಾತ್ರ ವಹಿಸಿದರು. 1955 ರಲ್ಲಿ, ಉತ್ತಮ ಸರ್ಕಾರಕ್ಕಾಗಿ ಮಧ್ಯಪ್ರದೇಶ ಮತ್ತು ಬಿಹಾರ ವಿಭಜನೆಯನ್ನು ಪ್ರಸ್ತಾಪಿಸಿದ ಮೊದಲ ವ್ಯಕ್ತಿ ಅವರು. ಅವರು ಸಂಸ್ಕೃತವನ್ನು ಭಾರತೀಯ ಒಕ್ಕೂಟದ ಅಧಿಕೃತ ಭಾಷೆಯನ್ನಾಗಿ ಮಾಡಲು ಬಯಸಿದ್ದರು ಮತ್ತು ಅವರು ಎರಡು ಬಾರಿ ಲೋಕಸಭಾ ಚುನಾವಣೆಯಲ್ಲಿ ಭಾಗವಹಿಸಿದರು ಆದರೆ ಎರಡೂ ಸಂದರ್ಭಗಳಲ್ಲಿ ಗೆಲ್ಲಲು ವಿಫಲರಾದರು. ಅವರ ಆತ್ಮಚರಿತ್ರೆ ವೀಸಾಕ್ಕಾಗಿ ಕಾಯುವುದು, ಕೊಲಂಬಿಯಾ ವಿಶ್ವವಿದ್ಯಾಲ ಯದಲ್ಲಿ ಪಠ್ಯಪುಸ್ತಕವಾಗಿ ಬಳಸಲಾಗುತ್ತದೆ. ಅವರು ಉದ್ಯೋಗ ಮತ್ತು ಕ್ಷೇತ್ರ ಮೀಸಲಾತಿಯ ತತ್ವವನ್ನು ವಿರೋಧಿಸುತ್ತಿದ್ದರು ಮತ್ತು ವ್ಯವಸ್ಥೆಯು ಅಸ್ತಿತ್ವದಲ್ಲಿರಲು ಬಯಸಲಿಲ್ಲ.

★ ಭಾರತದ ಹೊರಗೆ ಪಿಎಚ್‌ಡಿ ಪದವಿ ಪಡೆದ ಮೊದಲ ಭಾರತೀಯ ಅವರು. ಭಾರತದ ಕೆಲಸದ ಸಮಯವನ್ನು ದಿನಕ್ಕೆ 14 ರಿಂದ ಎಂಟು ಗಂಟೆಗಳವರೆಗೆ ಇಳಿಸಬೇಕೆಂದು ಒತ್ತಾಯಿಸಿದವರು ಅಂಬೇಡ್ಕರ್. ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಿದ ಭಾರತೀಯ ಸಂವಿಧಾನದ 370 ನೇ ವಿಧಿಯ ತೀವ್ರ ವಿರೋಧಿಯಾಗಿದ್ದರು.

★ 1916 ರಲ್ಲಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಬರೋಡಾ ರಾಜಪ್ರಭುತ್ವದ ರಾಜ್ಯಕ್ಕೆ ರಕ್ಷಣಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಅವರು ದಲಿತರಾಗಿದ್ದರಿಂದ ಕೆಲಸ ಸುಲಭವಾಗಿರಲಿಲ್ಲ. ಅವರನ್ನು ಜನರು ಅಪಹಾಸ್ಯ ಮಾಡಿದರು ಮತ್ತು ಹೆಚ್ಚಾಗಿ ನಿರ್ಲಕ್ಷಿಸಿದರು. ನಿರಂತರ ಜಾತಿ ತಾರತಮ್ಯದ ನಂತರ, ಅವರು ರಕ್ಷಣಾ ಕಾರ್ಯದರ್ಶಿ ಹುದ್ದೆಯನ್ನು ತೊರೆದು ಖಾಸಗಿ ಬೋಧಕ ಮತ್ತು ಲೆಕ್ಕಪತ್ರಗಾರರಾಗಿ ಕೆಲಸಗಳನ್ನು ಪಡೆದರು.

**ಕಾನೂನು ಶಿಕ್ಷಕನಿಂದ ಭಾರತೀಯ ಸಂವಿಧಾನ ಶಿಲ್ಪಿಯಾಗಿ**

★ 1935 ರಲ್ಲಿ, ಡಾ. ಅಂಬೇಡ್ಕರ್ ಅವರು ಮುಂಬೈನ ಸರ್ಕಾರಿ ಕಾನೂನು ಕಾಲೇಜಿನ ಪ್ರಾಂಶುಪಾಲರಾದರು, ಅಲ್ಲಿ ಅವರು 1928ರಿಂದ ಬೋಧಿಸುತ್ತಿದ್ದರು. 1942 ರಿಂದ 1946 ರವರೆಗೆ, ಅವರು ವೈಸ್ರಾಯ್ ಅವರ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಮಿಕ ಸದಸ್ಯರಾಗಿ ಸೇವೆ ಸಲ್ಲಿಸಿದರು.

★ 1946 ರಲ್ಲಿ ಸಂವಿಧಾನ ಸಭೆಗೆ ಆಯ್ಕೆಯಾದ ಅವರು, 1947 ರ ಆಗಸ್ಟ್ 15 ರಂದು ಭಾರತದ ಮೊದಲ ಕಾನೂನು ಸಚಿವರಾಗಿ ಅಧಿಕಾರ ವಹಿಸಿಕೊಂಡರು.

★ ಕರಡು ಸಮಿತಿಯ ಅಧ್ಯಕ್ಷರಾಗಿ, ಡಾ. ಅಂಬೇಡ್ಕರ್ ಅವರು ಭಾರತದ ಸಂವಿಧಾನದ ರಚನೆಯ ನೇತೃತ್ವ ವಹಿಸಿದರು, ಮಹಾವೀರ್ ತ್ಯಾಗಿ ಮತ್ತು ಡಾ. ರಾಜೇಂದ್ರ ಪ್ರಸಾದ್ ಅವರಿಂದ ಪ್ರಶಂಸೆ ಗಳಿಸಿದರು.

★ 1952 ರ ಸಾರ್ವತ್ರಿಕ ಚುನಾವಣೆಯ ನಂತರ, ಅವರು ರಾಜ್ಯಸಭೆಗೆ ಸೇರಿದರು. ಅದೇ ವರ್ಷ, ಅವರು ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದರು, ನಂತರ 1953 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಮತ್ತೊಂದು ಗೌರವ ಡಾಕ್ಟರೇಟ್ ಪಡೆದರು.

**ತೀರ್ಮಾನ:** ಬಾಬಾ ಸಾಹೇಬ್ ಎಂದೇ ಜನಪ್ರಿಯರಾಗಿರುವ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ನ್ಯಾಯಶಾಸ್ತ್ರಜ್ಞ, ರಾಜಕಾರಣಿ, ಅರ್ಥಶಾಸ್ತ್ರಜ್ಞ, ಬರಹಗಾರ, ಸಂಪಾದಕರಾಗಿದ್ದರು. ಅವರು ದಲಿತರಾಗಿದ್ದರು, ಅವರು ಸಾಮಾನ್ಯವಾಗಿ ಜಾತಿ ತಾರತಮ್ಯಕ್ಕೆ ಒಳಗಾಗುತ್ತಿದ್ದರು. ಅವರಿಗೆ ಇತರ ಜಾತಿಗಳ ಮಕ್ಕಳೊಂದಿಗೆ ಊಟ ಮಾಡಲು ಅಥವಾ ಶಾಲೆಯಲ್ಲಿ ನೀರು ಕುಡಿಯಲು ಸಹ ಅವಕಾಶವಿರಲಿಲ್ಲ.

ಅವರ ಕಥೆ ದೃಢಸಂಕಲ್ಪದ ಅತ್ಯುತ್ತಮ ಉದಾಹರಣೆಯಾಗಿದೆ ಮತ್ತು ಶಿಕ್ಷಣವು ಯಾರ ಭವಿಷ್ಯವನ್ನು ಹೇಗೆ ಬದಲಾಯಿಸಬಹುದು ಎಂಬುದನ್ನು ತೋರಿಸುತ್ತದೆ. ಜಾತಿ ತಾರತಮ್ಯಕ್ಕೆ ಒಳಗಾದ ಮಗುವೊಂದು ಸ್ವತಂತ್ರ ಭಾರತದ ಸಂವಿಧಾನದ ಶಿಲ್ಪಿಯಾಗಿ ಬೆಳೆದು ಮುಂದೆ ಮನುಷ್ಯನಾಯಿತು. ಪ್ರತಿಕೂಲ ಪರಿಸ್ಥಿತಿ ಎದುರಾದರೂ ನಿಮ್ಮನ್ನು ನೀವು ಬಿಟ್ಟುಕೊಡದಿರಲು ಸ್ವರ್ಗದಲ್ಲಿ ಬರೆಯಲಾದ ಒಂದು ಕಥೆ ಅತ್ಯುತ್ತಮ ಉದಾಹರಣೆಯಾಗಿದೆ.

## ಆಲೂರಿನಲ್ಲಿ ಇಂದು ಅಂಬೇಡ್ಕರ್ ಜಯಂತಿ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಪಟ್ಟಣ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ, ಸಹಯೋಗದಲ್ಲಿ ಏ.14 ರಂದು ಬೆಳಿಗ್ಗೆ 10 ಗಂಟೆಗೆ ಆಲೂರು ತಾಲ್ಲೂಕು ಆಡಳಿತ ಸೌಧ, ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕ ಎಸ್.ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

## ಯುವನಿಧಿ ಯೋಜನೆ ಅರಿವು ಸಪ್ತಾಹ



• ಪ್ರಜೋದಯ ವರದಿ


ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಯುವನಿಧಿ ಯೋಜನೆಯ ಕುರಿತಾಗಿ ನೊಂದಣಿಯ ಮಾಹಿತಿ ಅರಿವು ಕಾರ್ಯಕ್ರಮವನ್ನು ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್ ಗೌಡ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸರ್ಕಾರದ ಮಹತ್ವಾಕಾಂಕ್ಷೆ ಗ್ಯಾರಂಟಿ ಯೋಜನೆಗಳ ಪೈಕಿ ವಿದ್ಯಾವಂತ ನಿರುದ್ಯೋಗ ಯುವಕರಿಗಾಗಿ ರೂಪಿಸಿರುವ ಯುವನಿಧಿ ಯೋಜನೆಯ ಕುರಿತಾಗಿ ಡಿಗ್ರಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ರಾಜ್ಯದ ಜನತೆಗೆ, ಯುವಕರಿಗೆ, ಮಹಿಳೆಯರಿಗೆ ಆರ್ಥಿಕ ನೆರವು ನೀಡಲೆಂದು 5 ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ, ಅವುಗಳ ಸೂಕ್ತ ನಿರ್ವಹಣೆಗಾಗಿ 14 ಜನರ ಸಮಿತಿ ರಚಿಸಿ, ತಾಲ್ಲೂಕು ಪಂಚಾಯಿತಿಯಲ್ಲಿ ಕಛೇರಿ ನೀಡಿದೆ.

ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಯೋಜನೆಯ ಸದುಪಯೋಗಕ್ಕೆ ಮುಂದಾಗಬೇಕು. ನಿಮ್ಮಗಳಿಗೆ ಏನಾದರು ಸಮಸ್ಯೆ, ದೂರುಗಳಿದ್ದಲ್ಲಿ ತಾ.ಪಂ.ನಲ್ಲಿನ ತಮ್ಮ ಕಛೇರಿಯ ದೂರು ಪೆಟ್ಟಿಗೆಯಲ್ಲಿ ದೂರು ಸಲ್ಲಿಸಬಹುದು, ಇಲ್ಲವೇ ತಮ್ಮನ್ನು ನೇರವಾಗಿ ಭೇಟಿ ಮಾಡಬಹುದೆಂದರು.

ತಾ.ಪಂ. ಸಹಾಯಕ ನಿರ್ದೇಶಕ ಗಿರೀಶ್, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಕಛೇರಿಯ ಪುರುಷೋತ್ತಮ. ಸಮಿತಿ ಸದಸ್ಯರಾದ ನಾಗೇಶ್, ಜನಾರ್ಧನ್, ಸುರೇಶ್, ಕೆಂಪೇಗೌಡ, ಸುರೇಶ್, ಕಾಲೇಜು ಪ್ರಾಂಶುಪಾಲರಿದ್ದರು.

## ಪಿಜಿ-ಸಿಇಟಿ ತರಗತಿಗೆ ಚಾಲನೆ



• ಪ್ರಜೋದಯ ವರದಿ

**ಹಾಸನ:** ಗುಡ್ ಸಿಟಿಜನ್ ಕಾಲೇಜಿನಲ್ಲಿ ಎಪಿಪಿ ಅಕಾಡೆಮಿ ವತಿಯಿಂದ ಬ್ಯಾಂಕಿಂಗ್ ಮತ್ತು ಪಿಜಿ-ಸಿಇಟಿ ತರಗತಿಗೆ ಚಾಲನೆ ನೀಡಲಾಯಿತು.

ಅಕಾಡೆಮಿ ಪ್ರಾಧ್ಯಾಪಕರು ವಿವಿಧ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮಕ್ಕೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಕಾಲೇಜಿನ ಅಧ್ಯಾಪಕರು ಮತ್ತು ಅಧ್ಯಾಪಕೇತ್ತರ ವರ್ಗದವರು ಮತ್ತು ಅಕಾಡೆಮಿಯಿಂದ ಪ್ರಾಂಶುಪಾಲರು ಹಾಜರಿದ್ದರು.

ಕಾರ್ಯಗಾರದಲ್ಲಿ ಅಕಾಡೆಮಿಯ ಪ್ರವೀಣ್, ಅಭಿಷೇಕ್ ಮತ್ತು ಡಾ. ಪ್ರಶಾಂತ್ ಅವರು ಲಭ್ಯವಿರುವ ಕೋರ್ಸ್‌ಗಳ ಬಗ್ಗೆ ಹೆಚ್ಚಿನ ಉಪಯುಕ್ತ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಗುಡ್ ಸಿಟಿಜನ್ ಕಾಲೇಜಿನ ಉಪನ್ಯಾಸಕರಾದ ಸತೀಶ್, ದಿಲೀಪ್, ಬಸವಣ್ಣ, ಕಾಂತರಾಜ್, ಹೇಮಂತ್ ಕುಮಾರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ



"ಜನರ ಜೀವನ ಮಟ್ಟ ಸುಧಾರಿಸಲು ಶಿಕ್ಷಣವು ಪ್ರಮುಖವಾದ ಅಸ್ತ್ರವಾಗಿದೆ"

-ಡಾ. ಬಿ.ಆರ್. ಅಂಬೇಡ್ಕರ್

# 135ನೇ ಜನ್ಮದಿನಾಚರಣೆ

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ

**ಡಾ. ಬಿ.ಆರ್. ಅಂಬೇಡ್ಕರ್** ರವರ

**ಪ್ರತಿಮೆಗೆ ಮಾಲಾರ್ಪಣೆ**

ಏಪ್ರಿಲ್ 14, 2026, ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ

ವಿಧಾನಸೌಧದ ಪೂರ್ವ ದ್ವಾರ, ಬೆಂಗಳೂರು

**ವೇದಿಕೆ ಕಾರ್ಯಕ್ರಮ**

ಏಪ್ರಿಲ್ 14, 2026, ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ, ಬೆಂಗಳೂರು

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು


CMYK CMYK CMYK CMYK

# ಯಾವುದೇ ರಾಷ್ಟ್ರಕ್ಕೂ ತೈಲ ಮಾರಾಟ ಮಾಡಲು ಸಿದ್ಧ: ಇರಾನ್

• ಪ್ರಜೋದಯ ವರದಿ

**ಟೆಹರಾನ್:** ತನ್ನಲ್ಲಿರುವ ತೈಲವನ್ನು ಯಾವುದೇ ರಾಷ್ಟ್ರಕ್ಕೆ ಮಾರಾಟ ಮಾಡಲು ಸಿದ್ಧವಿರುವುದಾಗಿ ಭಾರತಕ್ಕೆ ಇರಾನ್ ಸೋಮವಾರ ಹೇಳಿದೆ.

ಭಾರತಕ್ಕೆ ಇರಾನ್ ರಾಯಭಾರಿಯಾಗಿರುವ ಡಾ.ಮೊಹಮ್ಮದ್ ಫತಾಲಿ ಅವರು ಈ ಹೇಳಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಸೃಷ್ಟಿಯಾಗಿರುವ ಉದ್ವಿಗ್ನತೆಯು ಜಾಗತಿಕ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡಿದೆ. ಇಸ್ರೇಲ್ ಹಾಗೂ ಅಮೇರಿಕಾ ಸೇನೆಗಳು ಇರಾನ್ ಮೇಲೆ ಫೆ.28ರಂದು ಜಂಟಿ ದಾಳಿ ನಡೆಸಿದ್ದವು. ಆ ವೇಳೆ, ಇರಾನ್ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಸೇರಿ ಹಲವರು ಹತ್ಯೆಯಾದರು.



ಅದರಿಂದ ಕೆರಳಿರುವ ಇರಾನ್, ಪ್ರತಿದಾಳಿ ಆರಂಭಿಸಿತ್ತು. ಇಸ್ರೇಲ್, ಅಮೇರಿಕಾ ವಿರುದ್ಧ ವಷ್ಟೇ ಅಲ್ಲದೆ, ಅವುಗಳ ಮಿತ್ರ ರಾಷ್ಟ್ರಗಳತ್ತಲೂ ಕ್ಷಿಪಣಿ, ಡ್ರೋನ್‌ಗಳ ಮೂಲಕ ದಾಳಿ ಮಾಡಿತ್ತು. ಮಾತ್ರವಲ್ಲದೆ, ತೈಲ ಸರಬರಾಜಿನ ಪ್ರಮುಖ ಮಾರ್ಗವಾಗಿರುವ ಹೊರ್ಮುಜ್ ಮೇಲೆ ನಿಯಂತ್ರಣ ಸಾಧಿಸಿ, ಜಗತ್ತಿನಾದ್ಯಂತ ತೈಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವಂತೆ ಮಾಡಿದೆ. ಆ ಮೂಲಕ ಅಮೇರಿಕಾದ ಮೇಲೆ ಒತ್ತಡ ಸೃಷ್ಟಿಸಿತ್ತು.

ತೈಲ ಅಭಾವದಿಂದಾಗಿ ಆಹಾರ ಬೆಲೆಗಳೂ ಗಗನಮುಖಿಯಾಗಿವೆ. ಅದರಿಂದಾಗಿ, ಯುದ್ಧ ಕೊನೆಗೊಳಿಸುವಂತೆ ಅಂತರರಾಷ್ಟ್ರೀಯ ಸಮುದಾಯ ಕರೆ ನೀಡಿದೆ. ಏತನ್ಮಧ್ಯೆ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಅಮೇರಿಕಾ ಹಾಗೂ ಇರಾನ್ ಎರಡು ವಾರಗಳ ಮಟ್ಟಿಗೆ ಕದನ ವಿರಾಮ ಘೋಷಿಸಿದ್ದವು.

ನಂತರ, ಎರಡೂ ರಾಷ್ಟ್ರಗಳ ನಿಯೋಗಗಳು ಇಸ್ಲಾಮಾಬಾದ್‌ನಲ್ಲಿ ಸಭೆ ಸೇರಿ ಶಾಂತಿ ಸ್ಥಾಪನೆ ಕುರಿತು ಚರ್ಚಿಸಿದ್ದವು. ಆದರೆ, ಮಾತುಕತೆ ಯಶಸ್ವಿಯಾಗಿಲ್ಲ. ಅದರ ಬೆನ್ನಲ್ಲೇ, ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೊರ್ಮುಜ್‌ನಲ್ಲಿ ಸಂಚರಿಸುವ ಹಡಗುಗಳನ್ನು ನಿರ್ಬಂಧಿಸುವುದಾಗಿ ಮತ್ತು ಜಲಸಂಧಿಯ ಮೇಲೆ ದಿಗ್ಬಂಧನ ಹೇರುವುದಾಗಿ ಎಚ್ಚರಿಕೆ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಇರಾನ್ ಕೂಡ ಬೆದರಿಕೆಯೊಡ್ಡಿದೆ. ಹೊರ್ಮುಜ್‌ಗೆ ದಿಗ್ಬಂಧನ ಹೇರಿದರೆ ಒಮಾನ್ ಹಾಗೂ ಪರ್ಷಿಯಾ ಕೊಲ್ಲಿಯ ಯಾವುದೇ ಬಂದರು ಸುರಕ್ಷಿತವಾಗಿ ಉಳಿಯುವುದಿಲ್ಲವೆಂದು ಹೇಳಿದೆ. ಈ ಬೆಳವಣಿಗೆಗಳ ನಡುವೆಯೇ, ಫತಾಲಿ ಹೇಳಿಕೆ ಹೊರಬಿದ್ದಿದೆ.

## ಲೆಬನಾನ್ : ಇನ್ನಷ್ಟು ಪ್ರದೇಶ ಇಸ್ರೇಲ್ ವಶ

**ಜೆರುಸಲೇಂ:** ದಕ್ಷಿಣ ಲೆಬನಾನ್‌ನ ಬಿಂತ್ ಜಬೈಲ್ ನಗರವನ್ನು ತನ್ನ ಸೇನಾ ಪಡೆಗಳು ಸುತ್ತುವರೆದಿದ್ದು, ಆಕ್ರಮಣ ನಡೆಸಿವೆ ಎಂದು ಇಸ್ರೇಲ್ ಸೋಮವಾರ ತಿಳಿಸಿದೆ.

ಹಲವು ದಿನಗಳಿಂದ ಗಡಿಯಲ್ಲಿ ಉದ್ವಿಗ್ನತೆಯ ವಾತಾವರಣವಿದ್ದು, ನಗರದ ಪ್ರವೇಶ ದ್ವಾರದಲ್ಲೇ ಇಸ್ರೇಲ್ ಫಿರಂಗಿ ದಾಳಿ ನಡೆಸಿದೆ. ಕಳೆದೊಂದು ವಾರದ ಅವಧಿಯಲ್ಲಿ ಮುಖಾ ಮುಖಿ ಘರ್ಷಣೆ ಹಾಗೂ ವಾಯುದಾಳಿಯಲ್ಲಿ ನೂರಕ್ಕೂ ಹೆಚ್ಚು ಹಿಜ್ಬುಲ್ಲಾ ಬಂಡು ಕೋರರನ್ನು ಹತ್ಯೆ ಮಾಡಿದ ಬಳಿಕ ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ತನ್ನ ಹಿಡಿತ ಬಿಗಿಗೊಳಿಸಿದೆ. ಇಸ್ರೇಲ್ ಗಡಿಯಿಂದ ಐದು ಕಿ.ಮೀ. ದೂರದಲ್ಲಿರುವ ಬಿಂತ್ ಜಬೈಲ್‌ನಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರು ತಮ್ಮ ಸೇನೆಯೊಂದಿಗೆ ಸಂಘರ್ಷದಲ್ಲಿ ನಿರತರಾಗಿದ್ದರು.

## ಕೆಆರ್‌ಎಸ್ ಪಕ್ಷದ ಮುಖಂಡರ ಮೇಲೆ ಪ್ರಕರಣ: ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕೆ.ಆರ್.ಎಸ್. ಪಕ್ಷದ ಉಪಾಧ್ಯಕ್ಷ ಸೋಮಸುಂದರ್ ಅವರನ್ನು ಸುಳ್ಳು ಪ್ರಕರಣ ದಾಖಲಿಸಿ ಬಂಧಿಸಿರುವುದು ಹಾಗು ರಾಜ್ಯ ಉಪಾಧ್ಯಕ್ಷ ಜ್ಞಾನ ಸಿಂಧುಸ್ವಾಮಿ, ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ್ ಭಟ್ಟರಹಳ್ಳಿ ಅವರ ಮೇಲೂ ಸುಳ್ಳು ಪ್ರಕರಣ ದಾಖಲಿಸಿರು ವುದನ್ನು ಖಂಡಿಸಿ ಪಕ್ಷದ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದರು.



ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿ, ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು. ಈ ವೇಳೆ ಕೆ.ಆರ್.ಎಸ್.ಪಕ್ಷದ ಜಿಲ್ಲಾಧ್ಯಕ್ಷ ಉಮೇಶ್ ಬೆಳಗುಂಬ ಅವರು ಮಾತನಾಡಿ, ನಮ್ಮ ಪಕ್ಷದ ಪದಾಧಿಕಾರಿಗಳು ಸರ್ಕಾರದ ವಿರುದ್ಧ ಅಹವಾಲು ಸಲ್ಲಿಸಲು ಹೋದಾಗ ಅವರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ. ಇದು ಆಡಳಿತದ ದೌರ್ಜನ್ಯ ತೋರಿಸುತ್ತದೆ. ಮುಖ್ಯಮಂತ್ರಿ ಹಾಗು ಗೃಹಮಂತ್ರಿ ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊಂದಿದ್ದಾರೆ. ನ್ಯಾಯಕ್ಕಾಗಿ ಬಂದವರನ್ನೇ ಬಂಧಿಸಿ ಪ್ರಕರಣ ದಾಖಲಿಸಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಕಾನೂನು ಜಾರಿಗೊಳಿಸಬೇಕಾದವರೇ ಕಾನೂನಿನ ದುರುಪಯೋಗ ಮಾಡುತ್ತಿದ್ದರೆ, ಸಾಮಾನ್ಯ ಜನರಿಗೆ ಯಾವ ರೀತಿಯ ಸಂದೇಶ ನೀಡಲಾಗುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟ ಪಡಿಸಬೇಕು. ಈ ಘಟನೆಗಳಿಂದ ಯಾರಾದರೂ ಯಾರ ಮೇಲಾದರೂ ಸುಳ್ಳು ದೂರುಗಳನ್ನು ನೀಡಿ ಪ್ರಕರಣ ದಾಖಲಿಸಬಹುದೆಂಬ ಭೀತಿ ಸಾರ್ವಜನಿಕರಲ್ಲಿ ಉಂಟಾಗಿದೆ. ಅದರಿಂದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ಉಂಟಾಗುತ್ತಿದೆಂದು ಆತಂಕ ವ್ಯಕ್ತಪಡಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡುವುದು ಕಾನೂನು ಬಾಹಿರವೇ. ವಿಡಿಯೋ ಮಾಡಿದ ಕಾರಣಕ್ಕೆ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಮನಬಂದಂತೆ ಸೆಕ್ಷನ್‌ಗಳನ್ನು ಬಳಸಿಕೊಂಡು ಪ್ರಕರಣ ದಾಖಲಿಸುವುದು ಕಾನೂನು ಬದ್ಧವೇ ಎಂಬುದರ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು. ಸಂಜ್ಞೆಯ ಅಪರಾಧಗಳಡಿಯಲ್ಲಿ ಪ್ರಕರಣ ದಾಖಲಿಸಲು ದೃಢವಾದ ಸಾಕ್ಷ್ಯಾಧಾರ ಅಗತ್ಯವಿಲ್ಲವೆ. ಬಿಎನ್‌ಎಸ್ ಅಡಿಯಲ್ಲಿ ಲಭ್ಯವಿರುವ 14 ದಿನಗಳ ಪ್ರಾಥಮಿಕ ತನಿಖೆ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿಲ್ಲವೆಂದು ಪ್ರಶ್ನಿಸಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳು ಕಾನೂನು ಪ್ರಕ್ರಿಯೆಗಳ ದುರುಪಯೋಗದ ಅನುಮಾನಕ್ಕೆ ಕಾರಣವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ನಿರ್ಪಕ್ಷಪಾತ ತನಿಖೆ ನಡೆಸಿ, ನಿರಪರಾಧಿಗಳಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಕೆ.ಆರ್.ಎಸ್. ಪಕ್ಷದ ಪ್ರಧಾನ ಕಾರ್ಯದರ್ಶಿ ಮಧು ಚಿಕ್ಕನಹಳ್ಳಿ, ರಮೇಶ್ ಬೂವನಹಳ್ಳಿ, ತಾಲ್ಲೂಕು ಅಧ್ಯಕ್ಷ ಉಮೇಶ್, ಶಿವಕುಮಾರ್, ನಿರಂಜನ್ ಅಂಚೂರ್, ಜಗದೀಶ್ ರಾಜಗಟ್ಟ, ರವಿನಂದನಂದನ್, ಕುಮಾರ್ ಇದ್ದರು.

## ಮಹಿಳಾ ಟಿ-20 ವಿಶ್ವಕಪ್ ಬಹುಮಾನ ಮೊತ್ತ ಘೋಷಿಸಿದ ಐಸಿಸಿ

• ಪ್ರಜೋದಯ ವರದಿ

**ದುಬೈ:** ಮುಂಬರುವ ಮಹಿಳಾ ಟಿ-20 ವಿಶ್ವಕಪ್‌ಗಾಗಿ ಅಂತರ ರಾಷ್ಟ್ರೀಯ ಕ್ರಿಕೆಟ್ ಮಂಡಳಿಯು (ಐಸಿಸಿ) ಸೋಮವಾರ ದಾಖಲೆ ಮೊತ್ತದ 82 ಕೋಟಿ ರೂ. ಬಹುಮಾನ ಘೋಷಿಸಿದೆ.

ಪ್ರಸಕ್ತ ಸಾಲಿನ ಮಹಿಳಾ ಟಿ-20 ವಿಶ್ವಕಪ್ ಜೂನ್ 12ರಿಂದ ಆರಂಭವಾಗಲಿದ್ದು, ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ನಡೆಯಲಿದೆ. ಒಟ್ಟು ಬಹುಮಾನದ ಮೊತ್ತವನ್ನು 2024ರ ಆವೃತ್ತಿಗಿಂತ ಶೇ. 10ರಷ್ಟು ಹೆಚ್ಚಿಸಲಾಗಿದೆ. ಈ ಬಾರಿ ಟೂರ್ನಿಯಲ್ಲಿ 12 ತಂಡಗಳು ಭಾಗವಹಿಸಲಿವೆ. ಜೂನ್ 12ರಿಂದ ಜುಲೈ 5ರ ವರೆಗೆ ಏಳು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿದ್ದು, ಫೈನಲ್ ಪಂದ್ಯ ಐತಿಹಾಸಿಕ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

ಯುಎಇನಲ್ಲಿ ನಡೆದ ಕಳೆದ ಆವೃತ್ತಿಯಲ್ಲಿ 74 ಕೋಟಿ ಇದ್ದ ಬಹುಮಾನ ಮೊತ್ತ ಈ ಬಾರಿ 82 ಕೋಟಿಗೆ ಏರಿಕೆಯಾಗಿದೆ. ಚಾಂಪಿಯನ್ ಆಗುವ ತಂಡಕ್ಕೆ 21.8 ಕೋಟಿ ಲಭಿಸಲಿದೆ. ರನ್ನರ್ ಅಪ್ ಆಗುವ ತಂಡಕ್ಕೆ 10 ಕೋಟಿ ಬಹುಮಾನ ಸಿಗಲಿದೆ. ಸೆಮಿಫೈನಲ್‌ನಲ್ಲಿ ಸೋಲುವ ತಂಡಗಳು ತಲಾ 6.29 ಕೋಟಿ ಪಡೆಯಲಿವೆ. ಪ್ರತಿ ಲೀಗ್ ಪಂದ್ಯ ಗೆಲ್ಲುವ ತಂಡಕ್ಕೆ 29 ಲಕ್ಷ ಸಿಗಲಿದೆ. ಟೂರ್ನಿಯಲ್ಲಿ ಭಾಗವಹಿಸುವ ಎಲ್ಲಾ 12 ತಂಡಗಳಿಗೆ ಕನಿಷ್ಠ 2.06 ಕೋಟಿ ಬಹುಮಾನ ಮೊತ್ತ ಖಚಿತವಾಗಿದೆ. ಜೂನ್ 12ರಂದು ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ನಡುವಿನ ಪಂದ್ಯದೊಂದಿಗೆ ಟೂರ್ನಿ ಆರಂಭವಾಗಲಿದೆ. ಆಸ್ಟ್ರೇಲಿಯಾ, ಬಾಂಗ್ಲಾದೇಶ, ಭಾರತ, ಐರ್ಲೆಂಡ್, ನೆದರ್ಲೆಂಡ್ಸ್, ನ್ಯೂಜಿಲೆಂಡ್, ಪಾಕಿಸ್ತಾನ, ಸ್ಕಾಟ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಕಣದಲ್ಲಿವೆ.

## ನಿವೇಶನ ಸೆಟ್‌ಬ್ಯಾಕ್ ನಿಯಮ ಸಡಿಲಿಕೆಗೆ ಆಗ್ರಹ

» ಮೊದಲನೇ ಪುಟದಿಂದ

ಸೇರಿ ಅನೇಕ ವೃತ್ತಿಗಳಲ್ಲಿ ತೊಡಗಿರುವ ಸಾವಿರಾರು ಜನರು ಜೀವನ ಸಾಗಿಸಲು ಸಂಕಷ್ಟ ಅನುಭವಿಸುತ್ತಿದ್ದಾರೆ.

ಕಟ್ಟಡ ನಿರ್ಮಾಣ ಚಟುವಟಿಕೆ ಕಡಿಮೆಯಾಗಿರುವುದರಿಂದ ಕಟ್ಟಡ ಸಾಮಾಗ್ರಿಗಳ ವ್ಯಾಪಾರಸ್ಥರಿಗೂ ವ್ಯಾಪಾರದಲ್ಲಿ ಹಿನ್ನಡೆ ಉಂಟಾಗಿ ಆರ್ಥಿಕ ಸಂಕಷ್ಟ ಎದುರಾಗುತ್ತಿದೆ ಎಂದು ದೂರಿದರು. ಸಾಮಾನ್ಯ ಜನರು ಮನೆ ನಿರ್ಮಾಣ ಮಾಡುವುದೇ ಕಷ್ಟಕರವಾಗಿರುವ ಸಂದರ್ಭದಲ್ಲಿ ಇಂತಹ ಕಠಿಣ ನಿಯಮಗಳು ಇನ್ನಷ್ಟು ಒತ್ತಡ ಉಂಟುಮಾಡುತ್ತಿವೆ ಎಂದು ಸಾರ್ವಜನಿಕರು ಅಭಿ ಪ್ರಾಯ ಪಟ್ಟಿದ್ದಾರೆ. ಬೆಂಗಳೂರು ವ್ಯಾಪ್ತಿಯಲ್ಲಿ ಕೆಲ ಸಡಿಲಿಕೆ ಮಾಡಿರುವ ಮಾದರಿಯನ್ನು ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲೂ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ಸಂಬಂಧಪಟ್ಟ ಅಧಿಕಾರಿಗಳು ಹಾಗು ಜನಪ್ರತಿನಿಧಿಗಳು ತಕ್ಷಣ ಸಮಸ್ಯೆಯ ತೀವ್ರತೆ ಮನಗಂಡು, ಕಟ್ಟಡ ನಿರ್ಮಾಣ ನಿಯಮಾವಳಿಗಳಲ್ಲಿ ಅಗತ್ಯ ಸಡಿಲಿಕೆ ಮಾಡಬೇಕು. ಇದರಿಂದ ಜನರಿಗೆ ಮನೆ ನಿರ್ಮಾಣ ಸುಲಭವಾಗುವುದಲ್ಲದೆ, ಕಟ್ಟಡ ನಿರ್ಮಾಣ ಕ್ಷೇತ್ರಕ್ಕೂ ಮತ್ತೆ ಚೈತನ್ಯ ಸಿಗಲಿದೆ ಹಾಗೂ ಸಾವಿರಾರು ಕಾರ್ಮಿಕರಿಗೆ ಉದ್ಯೋಗಾವಕಾಶ ದೊರೆಯಲಿವೆ ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸುನೀಲ್, ಕೃಷ್ಣಕುಮಾರ್, ಮಳಲಿ ಶರತ್, ಸತೀಶ್, ಸಿ.ಕೆ. ಕಿರಣ್ ಕುಮಾರ್, ಚಿಕ್ಕೇಗೌಡ ಮತ್ತಿತರರು ಹಾಜರಿದ್ದರು.

## ಇಂದಿನಿಂದ ಕಾಲೇಜು ರಂಗ, ರಂಗ ಸುಗ್ಗಿ


» ಮೊದಲನೇ ಪುಟದಿಂದ

ಕಾಲೇಜು ವಿದ್ಯಾರ್ಥಿಗಳು ಅಭಿನಯಿಸಲಿದ್ದಾರೆ.

ಏ.16 ರಂದು ಬೆಳಿಗ್ಗೆ 10 ಗಂಟೆಗೆ ಸೆಂಟ್ರಲ್ ಕಾಮರ್ಸ್ ಕಾಲೇಜು ವಿದ್ಯಾರ್ಥಿಗಳಿಂದ ಪತ್ರಕರ್ತರ ಜಿ. ಪ್ರಕಾಶ್ ಕಾದಂಬರಿ ಆಧಾರಿತ, ಧನಂಜಯ ದಿಯಾನ್ ರಂಗರೂಪಕ್ಕೆ ತಂದಿರುವ ನನ್ಸಿರಿ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ವಿವರಿಸಿದರು.

ಪ್ರಥಮ ನಾಟಕವನ್ನು ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಉದ್ಘಾಟಿಸುವರು. ದ್ವಿತೀಯ ನಾಟಕವನ್ನು ಸಕಲೇಶಪುರ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಉದ್ಘಾಟಿಸುವರು. ನಿವೃತ್ತ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ ಉಪಸ್ಥಿತರಿರುವರು, ವಿಶೇಷ ಆಹ್ವಾನಿತರಾಗಿ ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ ಆಗಮಿ ಸುವರು. ಕೆಯೂಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು. ಸಮಾರೋಪ ಸಮಾರಂಭದಲ್ಲಿ ಲೋಕಾಯುಕ್ತರಾದ ಡಾ.ಬಿ.ಎನ್.ನಂದಿನಿ, ಅಂತ ರ್‍ರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಬಾನುಮುಷ್ತಾಕ್, ಕೆಯೂಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್. ಬಿ.ಮದನಗೌಡ, ಹಿರಿಯ ಕಲಾವಿದ ಗುಂಡಣ್ಣ, ಡಾ.ಎ.ಸಾವಿತ್ರಿ, ಹಾಸನ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ, ಸೆಂಟ್ರಲ್ ಕಾಮರ್ಸ್ ಅಧ್ಯಕ್ಷರಾದ ಪರಿಮಳ ಮಹೇಶ್, ಪ್ರಾಂಶುಪಾಲ ಚಂದ್ರಕಾಂತ್ ಪಡೆಸೂರು, ವಿಜಯ ಶಿಕ್ಷಣ ಸಂಸ್ಥೆಯ ತಾರಾಸ್ವಾಮಿ ಹಾಜರಿರುವರು ಎಂದರು.

ಕಸಪಾ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು, ಪತ್ರಕರ್ತ ಚಲಂ ಹಾಡ್ಲಹಳ್ಳಿ, ಮಧುಸೂದನ್, ಚಂದ್ರಕಾಂತ್ ಪಡೆಸೂರು ಇದ್ದರು.



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019